# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2012

II ಧಿಯೋ ಯೋನಃ ಪ್ರಚೋದಯಾತ್ II

ಬೆಲೆ ರೂ.2.50
WPP No. SK/MNG/WPP/69
D.O.P - 15th of every month from Udupi Sorting Office


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-12 ಸಂಚಿಕೆ-11 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.



'ಚಾಟಿ – ಚಟಾಕಿ'
ಮಾರ್ಪಳ್ಳಿ ಆರ್ ಮಂಜುನಾಥ್
ಪುಟ-4

ವ್ಯಕ್ತಿ ಪರಿಚಯ :ಶ್ರೀ ಜಗದಾಭಿರಾಮ ಸ್ವಾಮಿ
ಶ್ರೀ ನಯನಾಭಿರಾಮ ಸ್ವಾಮಿ
ವೈ.ಮೋಹನ ರಾವ್, ಎಚ್.ಎನ್.ಶ್ಯಾನುಭಾಗ್
ಪುಟ-5


ವೇದಗಣಿತದ ಪರಿಚಯ
ಸಿ.ಎಸ್.ರಾವ್
ಪುಟ-6

ಭಕ್ತ ಕವಿ ಪುರಂದರ ದಾಸರು
ಹರಿದಾಸ ಮ.ನಾ.ಹೆಬ್ಬಾರ
ಪುಟ-6


## ಉಡುಪಿಯ ಶ್ರೀಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದಾ ದೇವಿಗೆ ನವರಾತ್ರಿ ಉತ್ಸವ ಶಾರದಾ ಮಂಟಪದಲ್ಲಿ ವಿಜಯದಶಮಿಯಂದು ಚಂಡಿಕಾಹೋಮ-ಯಕ್ಷಗಾನ





ನವರಾತ್ರಿ ಕಳೆದು ಬರುವ ವಿಜಯ ದಶಮಿಯಂದು ಸಮಗ್ರ ಸ್ಥಾನಿಕ ಬ್ರಾಹ್ಮಣ ಸಮಾಜದ ಏಳಿಗೆಗಾಗಿ ಚಂಡಿಕಾಹೋಮವನ್ನು ನಡೆಸಿಕೊಂಡು ಬರುವ ಉದ್ದೇಶದಿಂದ ಸ್ಥಾಪನೆಯಾಗಿರುವ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಅಂದಿನಿಂದ ನಿರಂತರವಾಗಿ ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಿದೆ. ಹಾಗೆಯೇ ಶ್ರೀಶಾರದಾ ದೇವಿಗೆ ನವರಾತ್ರಿ ಉತ್ಸವವು ಪ್ರತಿವರ್ಷ ಆಚರಿಸಲ್ಪಡುತ್ತಿದೆ.

ಈ ವರ್ಷವೂ ಶ್ರೀಶಾರದಾ ದೇವಸ್ಥಾನ ದಲ್ಲಿ ನವರಾತ್ರಿ ವಿಶೇಷ ಪೂಜೆಗಳು ತಾ.16-10-2012ರಿಂದ ತಾ.23-10-2012ರ ವರೆಗೆ ನಡೆಯುತ್ತಿತ್ತು. ಪ್ರತಿದಿನ ಶ್ರೀದೇವಿಗೆ ಕಲ್ಪೋಕ್ತಪೂಜೆ, ಸಂಜೆ ಮಹಿಳಾವೇದಿಕೆ ಹಾಗೂ ಪರಿಸರದ ಭಕ್ತರಿಂದ ಲಲಿತಾ ಪಾರಾಯಣ, ದೇವಿಸ್ತೋತ್ರ ಪಠಣ ನಡೆಯುತ್ತಿದ್ದು ಶಾರದಾ ಮಂಟಪದ ಪರಿಸರದಲ್ಲಿ ಉತ್ಸವದ ವಾತಾವರಣ ಉಂಟಾಗುತ್ತಿತ್ತು. ತಾ.24-10-12ರ ವಿಜಯದಶಮಿಯಂದು ಗುರುವಾರ ಬೆಳಿಗ್ಗೆ 8 ಗಂಟೆಗೆ ಪುರೋಹಿತರಾದ ಬ್ರಾ।ಶ್ರೀ। ಪಾವಂಜೆ ವಾಸುದೇವ ಉಪಾಧ್ಯಾಯರು, ಇತರ ವೈದಿಕರು, ಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ಪದಾಧಿಕಾರಿಗಳು ಮತ್ತು ಚಂಡಿಕಾಹೋಮದ ಕರ್ತೃಗಳಾದ ಸಂಘದ ನಿರ್ದೇಶಕರಾದ ಶ್ರೀ ವೈ. ಮೋಹನ್‌ರಾವ್ ಮತ್ತು ಶ್ರೀಮತಿ ಉಷಾ ಮೋಹನ್‌ರಾವ್ ದಂಪತಿಗಳು ಸೇರಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಂತರ ಪ್ರಾರಂಭಗೊಂಡ ಚಂಡಿಕಾಹೋಮದ ಪೂರ್ಣಾಹುತಿಯು ಮಧ್ಯಾಹ್ನ 12-30 ಗಂಟೆಗೆ ಸಂಪನ್ನಗೊಂಡಿತು. ನಂತರ ಪ್ರಸಾದ ಭೋಜನದ ವ್ಯವಸ್ಥೆಯು ನಡೆಯಿತು. ಇದರ ಜವಾಬ್ದಾರಿಯನ್ನು ಮಂಜುನಾಥ ಹೆಬ್ಬಾರ ವಹಿಸಿದ್ದು ಸಂಘದ ಸದಸ್ಯರ ಹಾಗೂ ಸಮಾಜ ಬಾಂಧವರ ಸಹಕಾರದಿಂದ ಉತ್ತಮ ರೀತಿಯಿಂದ ನೆರವೇರಿಸಿದರು.

ಪ್ರತಿ ವರ್ಷದಂತೆ ಬೆಳಿಗ್ಗೆಯಿಂದಲೇ ವಿವಿಧ ಸ್ಪರ್ಧೆಗಳು ನಡೆದು ಭೋಜನ ಸಮಯದಲ್ಲಿ ಚೂರ್ಣಿಕೆ ಹೇಳುವ ಸ್ಪರ್ಧೆಯು ಜರುಗಿತು. ನಿರ್ಲಿಪ್ತ ನಿರ್ಣಾಯಕರು ತೀರ್ಪುಗಾರರಾಗಿದ್ದು ಶ್ರೀ ಕೃಷ್ಣಕುಮಾರ್ ಮಟ್ಟು, ಟಿ.ಜಗದೀಶ ರಾವ್, ಚಂದ್ರಕಾಂತ ರಾವ್ ಮೂಡುಬೆಳ್ಳೆ ಹಾಗೂ ಸಮಾಜದ ಯುವಕ ಯುವತಿಯರು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಮನರಂಜನೆ ಪ್ರಯುಕ್ತ ಅಜಿತ್ ರಾವ್ ಬಳಗದವರಿಂದ ನಾಗವಲ್ಲಿ ನೃತ್ಯವು ಮನಸೂರೆಗೊಂಡಿತು. ಭೋಜನದ ಹೊತ್ತಿಗೆ ಚಿತ್ರ ರಚನೆ, ರಂಗವಲ್ಲಿ, ಭಕ್ತಿಗೀತೆ, ಸ್ತೋತ್ರ ಕಂಠಪಾಠ ಸ್ಪರ್ಧೆ ಮುಗಿದಿದ್ದು, ಊಟದ ಬಳಿಕ ಹೂಜೋಡಣೆ, ಛದ್ಮವೇಷ ಸ್ಪರ್ಧೆ ನಡೆಯಿತು.

**ಉಚಿತ ವೈದ್ಯಕೀಯ ತಪಾಸಣಾ ಶಿಬಿರ :**

ವಿಜಯದಶಮಿಯಂದು ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಉಡುಪಿಯ ಆದರ್ಶ ಆಸ್ಪತ್ರೆ ಹಾಗೂ ಎಲ್ಲೂರು ಲಕ್ಷ್ಮೀನಾರಾಯಣ ಜೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸಹಯೋಗದೊಂದಿಗೆ ಡಾ। ವೈ.ಸುದರ್ಶನ್‌ರಾವ್‌ರವರ ಮುತುವರ್ಜಿಯಿಂದ ರಕ್ತದೊತ್ತಡ, ಮಧುಮೇಹ, ಇಸಿಜಿ, ದಂತಚಿಕಿತ್ಸೆ (Dental), ಚರ್ಮರೋಗ (ಸ್ಕಿನ್) ಮುಂತಾದ ಉಪಯುಕ್ತ ವೈದ್ಯಕೀಯ ತಪಾಸಣೆ ಉಚಿತವಾಗಿ ನುರಿತ ವೈದ್ಯರಿಂದ ನೆರವೇರಿತು. ನಮ್ಮ ಸಮಾಜದ ಯುವ ವೈದ್ಯರಾದ ಡಾ। ವೈ. ಸುದರ್ಶನ್‌ರಾವ್, ಡಾ। ಸನತ್

(3ನೇ ಪುಟಕ್ಕೆ...)





ಫೋಟೋ : ದಿನಮಣಿ ಶಾಸ್ತ್ರಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

**ಮೂರ್ಖಂ ವ್ಯಸನಿನಂ ಲುಬ್ಧಮಪ್ರಗಲ್ಭಂ ಭಯಾಕುಲಮ್ ।**
**ಕ್ರೂರಮನ್ಯಾಯಕರ್ತಾರಂ ನಾಧಿಪತ್ಯೇ ನಿಯೋಜಯೇತ್ ॥**

ಮೂರ್ಖನನ್ನು, ಚಟಗಳಲ್ಲಿ ಮುಳುಗಿರುವವರನ್ನು, ಆಸೆಬುರುಕನನ್ನು, ಪ್ರತಿಭೆಯಿಲ್ಲದವನನ್ನು, ಭಯಪಡುವವನನ್ನು, ಕ್ರೂರಿಯನ್ನು ಮತ್ತು ಅನೀತಿವಂತನನ್ನು ಯಾವತ್ತೂ ಗದ್ದುಗೆಯಲ್ಲಿ ಕೂರಿಸಬಾರದು.

★★★★

**ಸರ್ವತ್ರ ಗುಣವಾನ್ ದೇಶೇ ಶೋಭತೇ ಪ್ರಥಿತೋ ನರಃ ।**
**ಮಣಿಃ ಶೀರ್ಷೇ ಗಲೇ ಬಾಹೌ ಯತ್ರ ಕುತ್ರಾऽಪಿ ಶೋಭತೇ ॥**

ಸದ್ಗುಣಿಯಾದವನು ಎಲ್ಲಿದ್ದರೂ ಶೋಭಿಸುತ್ತಾನೆ. ಎಲ್ಲೆಡೆಯೂ ಗೌರವಕ್ಕೆ ಪಾತ್ರನಾಗುತ್ತಾನೆ. ಮುತ್ತಿನ ಮಣಿ ತಲೆಯಲ್ಲಿರಲಿ, ಕೊರಳಲ್ಲಿರಲಿ, ತೋಳುಗಳಲ್ಲಿರಲಿ, ಎಲ್ಲಿದ್ದರೂ ಅದು ಆಕರ್ಷಣೆಯಾಗಿ ತೋರುತ್ತದೆ.


★★★★

**ವೃಥಾ ವೈರಂ ವಿವಾದಂ ಚ ನ ಕುರ್ಯಾತ್ ಕೇನಚಿತ್ಸಹ ।**
**ಅರ್ಥಾಭಾವೇऽಪಿ ತತ್ ಪುಂಸಾಂ ಅನರ್ಥಾ ಏವ ಕಲ್ಪತೇ ॥**

ವಿನಾಕಾರಣ ಶತ್ರುತ್ವ ಕಟ್ಟಿಕೊಳ್ಳುವುದಾಗಲೀ, ವ್ಯರ್ಥ ವಾದದಲ್ಲಿ ತೊಡುಗುವುದಾಗಲೀ ಮಾಡಬಾರದು. ಏಕೆಂದರೆ ಇವುಗಳಿಂದ ಯಾವ ಲಾಭವೂ ಇಲ್ಲ, ಬದಲಿಗೆ ಅನರ್ಥ ತಪ್ಪಿದ್ದಲ್ಲ.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ರಾಜಸೂಯಯಾಗಕ್ಕೆ ಹೋದ ಮುಕುಂದನು ಯುಧಿಷ್ಠಿರನ ಅಪೇಕ್ಷೆಯಂತೆ ಇಂದ್ರಪ್ರಸ್ಥದಲ್ಲಿದ್ದನಷ್ಟೆ? ಇದೇ ಸಂದರ್ಭದಲ್ಲಿ ಸಾಲ್ವನು ದ್ವಾರಕೆಯ ಮೇಲೆ ಎರಗಿದ್ದು, ಶ್ರೀಕೃಷ್ಣನಿಗೆ ಕೆಲವು ಅಪಶಕುನಗಳು ಕಾಣಿಸಿಕೊಂಡವು. ದ್ವಾರಕೆಯಲ್ಲಿ ಏನೋ ಅನರ್ಥ ನಡೆಯುತ್ತಿದೆ ಎಂದು ಅವನಿಗೆ ಆಶಂಕೆ, ಆತಂಕಗಳಾದವು. ಅವನು ಕೂಡಲೆ ಇಂದ್ರಪ್ರಸ್ಥದಿಂದ ದ್ವಾರಕೆಗೆ ಧಾವಿಸಿಬಂದನು. ದೂರದಿಂದಲೇ ಗರುಡಧ್ವಜವನ್ನು ನೋಡಿದ ಯದುವೀರರಿಗೆ ಭಗವಂತನ ಆಗಮನ ತಿಳಿದು ಹೋಯಿತು. ಅವರ ಉತ್ಸಾಹಕ್ಕೆ ಉಬ್ಬರ ಬಂದಿತು. ದ್ವಾರಕೆಗೆ ಬಂದವನೇ ಶ್ರೀ ಕೃಷ್ಣನು ಬಲರಾಮನನ್ನು ದ್ವಾರಕೆಯ ರಕ್ಷಣೆಗೆ ನೇಮಿಸಿ ತಾನು ಸನ್ನದ್ಧನಾಗಿ ಯುದ್ಧರಂಗಕ್ಕೆ ಪ್ರವೇಶಿಸಿದನು. ವಾಸುದೇವನನ್ನು ನೋಡುತ್ತಲೆ ಮಾಯಾವಿಯಾದ ಸಾಲ್ವನು ಒಂದು ಭಯಂಕರವಾದ ಶಕ್ತ್ಯಾಯುಧವನ್ನು ಕೃಷ್ಣನ ಸಾರಥಿಯಾದ ದಾರುಕನ ಮೇಲೆ ಪ್ರಯೋಗಿಸಿದನು. ಗೋವಿಂದನು ಅದನ್ನು ತನ್ನ ಬಾಣದಿಂದ ಕತ್ತರಿಸಿ ಹಾಕಿದನು. ಹಾಗೇ ಹದಿನಾರು ಬಾಣಗಳಿಂದ ಸಾಲ್ವನನ್ನು ಹೊಡೆದು, ಸೂರ್ಯನು ಆಕಾಶವನ್ನು ತನ್ನ ಕಿರಣಗಳಿಂದ ಮುಚ್ಚುವಂತೆ ಅವನ ಸೌಭ ವಿಮಾನವನ್ನು ಅನೇಕಾನೇಕ ಬಾಣಗಳಿಂದ ಮುಚ್ಚಿದನು. ಆಗ ಸಾಲ್ವನು ಶಾರ್ಙ್ಗಧರನ ಎಡಗೈಗೆ ಬಾಣದಿಂದ ಹೊಡೆದನು. ಆಗ ಅವನ ಧನುಸ್ಸು ಕೆಳಗೆ ಬಿದ್ದು ಬಿಟ್ಟಿತು. ಅದನ್ನು ನೋಡಿ ಸಾಲ್ವನು ಆರ್ಭಟಿಸಿ ಹೇಳಿದನು, ‘‘ಮೂಢ, ನನ್ನ ಮಿತ್ರ ಶಿಶುಪಾಲನಿಗೆ ಹೆಂಡತಿಯಾಗಬೇಕಿದ್ದ ರುಕ್ಮಿಣಿಯನ್ನು ನಾವೆಲ್ಲ ನೋಡುತ್ತಿದ್ದಂತೆ ಅಪಹರಿಸಿಬಿಟ್ಟೆ. ಸಭೆಯಲ್ಲಿ ಪ್ರಮತ್ತನಾಗಿ ಕೂತಿದ್ದ ಆವನನ್ನು ಕೊಂದು ಹಾಕಿದೆ. ಹೀಗೆ ಎಲ್ಲೂ ಸೋತಿಲ್ಲವೆಂದು ಬೀಗುತ್ತಿರುವ ನಿನ್ನನ್ನು ಈಗ ಪುನಃ ಬಾರದ ಲೋಕಕ್ಕೆ ಅಟ್ಟುತ್ತೇನೆ’’. ಆಗ ಭಗವಂತನೆಂದನು, ‘‘ಹುಂಬ, ಸುಮ್ಮನೆ ಕೊಚ್ಚಿಕೊಳ್ಳುತ್ತಿರುವೆ. ವೀರರು ಕ್ರಿಯೆಯಲ್ಲಿ ತಮ್ಮ ಪೌರುಷವನ್ನು ಪ್ರಕಟಿಸುತ್ತಾರೆಯೇ ಹೊರತು ಮಾತಿನಲ್ಲಿ ಅಲ್ಲ. ನಿನ್ನನ್ನು ಆಲಿಂಗಿಸಲು ಬರುತ್ತಿರುವ ಮೃತ್ಯು ನಿನಗೆ ಕಾಣಿಸುತ್ತಿಲ್ಲ’’. ಹೀಗೆ ಹೇಳಿ ಶ್ರೀಕೃಷ್ಣನು ತನ್ನ ಕೌಮೋದಕಿ ಎಂಬ ಭಯಂಕರ ವೇಗದ ಗದೆಯಿಂದ ಸಾಲ್ವನಿಗೆ ಹೊಡೆದನು. ಅವನು ರಕ್ತಕಾರುತ್ತ ನಡುಗಿ ಹೋದನು. ಆ ಗದೆಯು ಪುನಃ ಶ್ರೀಹರಿಯ ಬಳಿಗೆ ಬಂದಾಗ ಸಾಲ್ವನು ಅದೃಶ್ಯನಾದನು. ಅದಾಗಿ ಸ್ವಲ್ಪ ಹೊತ್ತಿನಲ್ಲಿ ಬಬ್ಬ ಮನುಷ್ಯನು ಅಳುತ್ತ ಬಂದು ಕೃಷ್ಣನ ಮುಂದೆ ನಿಂತು ಕೊಂಡನು. ಅವನು ಭಗವಂತನಿಗೆ ನಮಸ್ಕರಿಸಿ ಹೇಳಿದನು, ‘‘ಕೃಷ್ಣ ಪರಮಾತ್ಮ ನಿನ್ನ ಪ್ರೀತಿಯ ತಂದೆಯನ್ನು ಸಾಲ್ವನು ಬಂಧಿಸಿಕೊಂಡು ಹೋದನು’’. ಅದನ್ನು ಕೇಳಿ ಜಗದೀಶನು ಸಾಮಾನ್ಯ ಮನುಷ್ಯನಂತೆ ದುಃಖಿಸಿದನು. ಮತ್ತೆ ವಿಚಾರ ಮಾಡಿದನು, ‘‘ಇದು ಹೇಗೆ ಸಾಧ್ಯ? ಯಾರಿಂದಲೂ ಜಯಿಸಲಾಗದ ನಮ್ಮಣ್ಣನು ದ್ವಾರಕೆಯನ್ನು ಕಾಯುತ್ತಿರುವನು. ಅಲ್ಲಿ ಸಾಲ್ವನಾಗಲೀ, ಇನ್ನು ಯಾರೇ ಆಗಲೀ ಹೋಗುವುದು ಅಶಕ್ಯ. ಆದರೂ ನನ್ನ ತಂದೆಯನ್ನು ಸಾಲ್ವನು ಬಂಧಿಸಿ ಒಯ್ದನೆಂದರೆ ವಿಧಿಯು ಅತಿ ಬಲಶಾಲಿ ಎಂಬುದನ್ನು ಒಪ್ಪಲೇ ಬೇಕು’’. ಹೀಗೆ ಯೋಚಿಸುತ್ತಿರುವಾಗ ಸಾಲ್ವನು ಕಾಣಿಸಿಕೊಂಡನು. ಅವನು ವಸುದೇವನನ್ನು ಹಿಡಿದುಕೊಂಡಿದ್ದನು. ಅವನು ಕೃಷ್ಣನಿಗೆಂದನು, ‘‘ಇದು ನಿನ್ನನ್ನು ಹೆತ್ತ ತಂದೆ. ನೀನು ನೋಡುತ್ತಿರುವಂತೆ ಇವನನ್ನು ಕೊಲ್ಲುತ್ತೇನೆ. ಸಾಧ್ಯವಾದರೆ ಇವನನ್ನು ಕಾಪಾಡಿಕೋ, ಹುಡುಗ’’. ಹೀಗೆ ಒದರಿದ ಸಾಲ್ವನು ವಸುದೇವನ ತಲೆಯನ್ನು ಕತ್ತರಿಸಿ ತನ್ನ ವಿಮಾನವನ್ನೇರಿದನು. ಸ್ವಲ್ಪ ಹೊತ್ತು ಮಾನವ ಸಹಜವಾದ ಅಜ್ಞಾನದಿಂದ ಆ ಸರ್ವಜ್ಞನಾದ ಭಗವಂತನು ಶೋಕಿಸಿದನು. ಕೂಡಲೇ ಅದೆಲ್ಲ ಮಯನು ಸಾಲ್ವನಿಗೆ ಹೇಳಿಕೊಟ್ಟ ಮಾಯಾ ವಿದ್ಯೆಯ ಆಟವೆಂಬುವುದು ತಿಳಿದು ಹೋಯಿತು. ಅಷ್ಟರಲ್ಲಿ ಸಾಲ್ವನು ಕೃಷ್ಣನ ಮೇಲೆ ಬಾಣಗಳ ಮೇಲೆ ಬಾಣವನ್ನು ಬಿಟ್ಟನು. ವಾಸುದೇವನೂ ಬಾಣಗಳಿಂದ ಅವನ ಕವಚ, ಬಿಲ್ಲು, ಕಿರೀಟಗಳನ್ನು ಪುಡಿ ಪುಡಿ ಮಾಡಿದನು. ಹಾಗೇ ಗದೆಯಿಂದ ಸೌಭ ವಿಮಾನವನ್ನೂ ಚೂರ್ಣ ಮಾಡಿ ಸಮುದ್ರಕ್ಕೆ ಬೀಳಿಸಿದನು. ಸಾಲ್ವನು ವಿಮಾನವನ್ನು ಬಿಟ್ಟು ನೆಲದ ಮೇಲೆ ಬಂದು ತನ್ನ ಗದೆಯನ್ನೆತ್ತಿಕೊಂಡು ದ್ವಾರಕಾಧೀಶನ ಕಡೆಗೆ ವೇಗವಾಗಿ ನುಗ್ಗಿದನು. ಶ್ರೀಕೃಷ್ಣನು ಭಲ್ಲೆಯಿಂದ ಅವನ ತೋಳನ್ನೆ ತುಂಡು ಮಾಡಿದನು. ಅನಂತರ ಸಾಲ್ವನ ಆಟವನ್ನು ಕೊನೆಗಾಣಿಸುವ ನಿಶ್ಚಯ ಮಾಡಿ ಭಗವಂತನು ಅದ್ಭುತವಾದ ಚಕ್ರವನ್ನು ಧರಿಸಿದನು. ಆಗ ದೇವದೇವನು ಉದಯಾದ್ರಿಯ ಸೂರ್ಯನಂತೆ ಪ್ರಕಾಶಿಸಿದನು. ಆ ಚಕ್ರದಿಂದ ಇಂದ್ರನು ವಜ್ರಾಯುಧದಿಂದ ವೃತ್ರನ ತಲೆಯನ್ನು ಕತ್ತರಿಸಿದಂತೆ ಸಾಲ್ವನ ತಲೆಯನ್ನು ತರಿದನು. ಆಗಸದಲ್ಲಿ ನೆರೆದಿದ್ದ ದೇವತೆಗಳು ದುಂದುಭಿಯನ್ನು ಮೊಳಗಿಸಿದರು. ಆಗ ದಂತವಕ್ತ್ರನು ತನ್ನ ಮಿತ್ರನಾದ ಶಿಶುಪಾಲ, ಸಾಲ್ವರ ವಧೆಯಿಂದ ರೋಷಾವಿಷ್ಟನಾಗಿ ಕೃಷ್ಣನೊಡನೆ ಯುದ್ಧಕ್ಕೆ ಬಂಧನು.

ದಂತವಕ್ತ್ರ ಕರೂಷ ದೇಶದ ಅರಸನಾದ ವೃದ್ಧ ಶರ್ಮನ ಮಗ. ಇವನ ತಾಯಿ ಬೇರೆಯಾರೂ ಅಲ್ಲ, ವಸುದೇವನ ತಂಗಿ ಶ್ರುತ ದೇವೆ. ಅರ್ಥಾತ್ ಶ್ರೀಕೃಷ್ಣನ ಸೋದರ ಭಾವನೇ ಇವನು. ಶಿಶುಪಾಲನೂ, ದಂತವಕ್ತ್ರನೂ ಶ್ರೀಮನ್ನಾರಾಯಣನ ದ್ವಾರ ಪಾಲಕರಾದ ಜಯ-ವಿಜಯರೇ. ಕುಮಾರರ (ಸನತ್ಕುಮಾರ ಮೊದಲಾದವರ) ಶಾಪದಿಂದ ಭೂಮಿಯ ಮೇಲೆ ಶ್ರೀಹರಿಯ ಶತ್ರುಗಳಾಗಿ ಹುಟ್ಟಿದ್ದರು.

ಶಿಶು ಪಾಲ, ಸಾಲ್ವ, ಪೌಂಡ್ರಕರು ಪರಲೋಕಕ್ಕೆ ಹೋದದ್ದರಿಂದ ಅವರಿಗೆ ಪರೋಕ್ಷವಾಗಿ ಸಹಾಯ ಮಾಡಲು ದಂತವಕ್ತ್ರನು ಸಂಕಲ್ಪಿಸಿದನು. ಅವನು ಒಂದು ಗದೆಯನ್ನು ಹಿಡಿದುಕೊಂಡು ಕಾಲ್ನಡಿಗೆಯಿಂದಲೇ ಯುದ್ಧಮಾಡಲು ಬಂದನು. ಅವನು ಪದಾತಿಯಾಗಿ ಬಂದದ್ದರಿಂದ ಶ್ರೀಕೃಷ್ಣನೂ ರಥದಿಂದ ಕೆಳಕ್ಕೆ ಹಾರಿ ಗದೆಯನ್ನು ಹಿಡಿದು ಕೊಂಡು ಅವನಿಗಿದಿರಾಗಿ ನಿಂತನು. ಅವನನ್ನು ನೋಡಿದ ದಂತವಕ್ತ್ರನು ಕೂಡಿಕೊಂಡನು, ‘‘ಒಳ್ಳೆಯ ಅದೃಷ್ಟದಿಂದ ಇಂದು ನೀನು ನನಗೆ ಕಾಣಿಸಿಕೊಂಡಿದ್ದೀ. ನೀನು ನನ್ನ ಸೋದರ ಭಾವ. ಆದರೆ ನೀನು ನನ್ನ ಮಿತ್ರರನ್ನು ಕೊಂದದ್ದು ಮಾತ್ರವಲ್ಲ ನನ್ನನ್ನೂ ಮುಗಿಸಲು ಯೋಜನೆ ಮಾಡಿಕೊಂಡಿದ್ದೀ. ಆದರೆ ನಿನಗೆ ಅಂತಹ ಅವಕಾಶನ್ನು ನಾನು ಕೊಡುವುದಿಲ್ಲ. ವಜ್ರಾಯುಧದಂತಹ ನನ್ನ ಗದೆಯಿಂದ ನಿನ್ನನ್ನು ಯಮಪುರಿಗೆ ಅಟ್ಟುತ್ತೇನೆ. ಹೀಗೆ ನನ್ನ ಮಿತ್ರರ ಋಣವನ್ನೂ, ಸೇಡನ್ನೂ ತೀರಿಸುತ್ತೇವೆ.’’ ಹೀಗೆ ಮಾವುತನು ಆನೆಯನ್ನು ಅಂಕುಶದಿಂದ ತಿವಿಯುವಂತೆ ದಂತವಕ್ತ್ರನು ಶ್ರೀಕೃಷ್ಣನನ್ನು ಮಾತುಗಳಿಂದ ಚುಚ್ಚಿದನು. ಬಳಿಕ ತನ್ನ ಗದೆಯಿಂದ ಭಗವಂತನ ತಲೆಗೆ ಹೊಡೆದನು. ಶ್ರೀಹರಿಯು ಆ ಪ್ರಹಾರವನ್ನು ಧೈರ್ಯ, ಸ್ಥೈರ್ಯದಿಂದ ಎದುರಿಸಿ ತನ್ನ ಕೌಮೋದಕಿ ಗದೆಯನ್ನೆತ್ತಿಕೊಂಡು ದಂತವಕ್ತ್ರನ ಎದೆಗೆ ಏಟುಕೊಟ್ಟನು. ಗದಾಘಾತದಿಂದ ಎದೆಯೊಡೆದ ದಂತವಕ್ತ್ರನು ರಕ್ತಕಕ್ಕುತ್ತ ಪ್ರಾಣಕಳೆದುಕೊಂಡು ನೆಲಕ್ಕೊರಗಿದನು. ಆಗ ಅವನ ದೇಹದಿಂದ ಒಂದು ಸೂಕ್ಷ್ಮವಾದ ಜ್ಯೋತಿಯು ಹೊರಟು ಶ್ರೀಕೃಷ್ಣನಲ್ಲಿ ಸೇರಿಹೋಯಿತು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**
**ನಿರೀಕ್ಷೆಯ ಹಾದಿಯಲ್ಲಿ**
(ಕಥಾ ಸಂಕಲನ)
*ಲೇಖಕಿ :* ಶ್ರೀಮತಿ ಸಾವಿತ್ರಿ ಮನೋಹರ್, (ಕಳಸ), ಕಾರ್ಕಳ.
*ಪ್ರಕಾಶಕರು :*
ಸಂದೀಪ ಸಾಹಿತ್ಯ, ಆತ್ರಾಡಿ-576107.
*ಬೆಲೆ :* 60/-

ನಿರೀಕ್ಷೆಯ ಹಾದಿಯಲ್ಲಿ ‘ಶುಭ ನುಡಿ’ಯಲ್ಲಿ ಬಿ.ಎಂ. ರೋಹಿಣಿ ಕುಡುಪು ಇವರು ಹೇಳುತ್ತಾರೆ ‘‘ಕಳೆದ ಶತಮಾನದಲ್ಲಿ ಮಹಿಳೆಯರ ಸಾಹಿತ್ಯ ಕೃಷಿಯನ್ನು ಗಮನಿಸಿದರೆ ಅವರೆಲ್ಲರೂ ಹೆಚ್ಚಾಗಿ ಕಥಾ ಸಾಹಿತ್ಯವನ್ನೇ ನೆಚ್ಚಿಕೊಂಡವರೆಂಬ ಸತ್ಯ ತಿಳಿಯುತ್ತದೆ. ಪತ್ರಿಕೆಗಳಲ್ಲಿ ಕತೆಗಳನ್ನು ಮೆಚ್ಚಿ ಓದುವ ಮತ್ತು ಬರೆಯುವ ಒಂದು ದೊಡ್ಡ ಮಹಿಳಾ ಸಮುದಾಯವೇ ಆಗ ನಿರ್ಮಾಣವಾಗುವಂತಾದದ್ದು ಪತ್ರಿಕಾ ಸಂಪಾದಕರ ಪ್ರೋತ್ಸಾಹದಿಂದ. ಆಗ ಸಣ್ಣ ಕತೆಗಳನ್ನೇ ಪ್ರಕಟಿಸುವ ಪತ್ರಿಕೆಗಳಿದ್ದವು. ನಮ್ಮ ಜಿಲ್ಲೆಯ ಸರಸ್ವತಿ ಬಾಯಿ ರಾಜವಾಡೆ, ವಸಂತಿಬಾಯಿ ಪಡುಕೋಣೆ ಮುಂತಾದವರಿಂದ ತೊಡಗಿ ಇಂದಿನ ಕತೆಗಾರ್ತಿಯರ ಕಥಾ ಸಾಹಿತ್ಯದ ರಚನಾ ಕೌಶಲ್ಯವನ್ನು ಗಮನಿಸಿದರೆ ಮಹಿಳೆಯರಿಗೆ ಕವನವನ್ನು ಬಿಟ್ಟರೆ ಈ ಪ್ರಕಾರವೇ ಸಾಹಿತ್ಯ ಸಾಧನೆಯ ಸುಲಭದ ಮಾರ್ಗವಾಗಿದೆ. ಆದುದರಿಂದ ಕನ್ನಡದಲ್ಲಿ ಅನೇಕ ಅತ್ಯುತ್ತಮ ಕತೆಗಾರ್ತಿಯರಿದ್ದಾರೆ. ಅವರಲ್ಲಿ ಸಾವಿತ್ರಿ ಮನೋಹರ್ ಅವರೂ ಒಬ್ಬರು.’’

ಲೇಖಕಿ ಶ್ರೀಮತಿ ಸಾವಿತ್ರಿ ಮನೋಹರ್ ಇವರು ತಮ್ಮ ‘ಮನದಾಳದಿಂದ’ ಹೇಳುತ್ತಾರೆ ‘‘ಈ ಕೃತಿ ಬರೆಯುವಾಗ ನನ್ನ ಮನದ ತುಂಬಾ ನಮ್ಮಮ್ಮನ ಕಲ್ಪನಾ ಶಕ್ತಿ, ಸ್ಮರಣ ಶಕ್ತಿ ಹಿತಮಿತ ಮೃದುಮಾತು, ಗೃಹಿಣಿಯ ಗತ್ತು ಗೈರತ್ತು, ಸೌಂದರ್ಯ ಉಪಾಸನೆ, ಸೌಂದರ್ಯ ಪ್ರಜ್ಞೆ, ಸಮಸ್ಯೆಗಳ ಸಿಕ್ಕು ಬಿಡಿಸುವ ಸಮಯ ಪ್ರಜ್ಞೆ ಹೀಗೇ ತುಂಬಿದ್ದ ಭಾವನೆಗಳು ಒಂದೇ? ಎರಡೇ? ಪದಪದಗಳಲ್ಲೂ ತುಂಬಿ ತುಳುಕಿದೆ ಅಮ್ಮನ ನೆರಳು. ಅಂತೆಯೇ ಕಥೆಗಳು ಒಂದರಂತೆ ಮತ್ತೊಂದಿಲ್ಲ. ಕಾವ್ಯರಸಗಳೂ ಭಿನ್ನ ಭಿನ್ನವಾಗಿವೆ. ಅನೇಕತೆಯಲ್ಲಿ ಏಕತೆ ತುಂಬಿ ಬಂದಿದೆ ಈ ಕೃತಿ. ಲೋಕೋ ಭಿನ್ನರುಚಿಯಲ್ಲವೇ? ನಿಮಗಿಷ್ಟವಾದುದದನ್ನು ಮೆಚ್ಚಿಕೊಳ್ಳಿರಿ.’’

ಇಂದಿರಾ ಹಾಲಂಬಿ ಅವರು ಲೇಖಕಿಗೆ ಅಭಿನಂದನೆಗಳನ್ನು ಹೀಗೆ ಸಲ್ಲಿಸುತ್ತಾರೆ ‘‘ಇಪ್ಪತ್ತು ಕತೆಗಳಿರುವ ಈ ಸಂಕಲನದಲ್ಲಿ ವಿಷಯ ವೈವಿಧ್ಯತೆ, ಭಾಷಾ ಶೈಲಿಯ ಭಿನ್ನತೆ... ಜೊತೆಗೆ ಗಂಭೀರ, ಹಾಸ್ಯ ಕರುಣೆ, ಶೋಕ, ಲಾಲಿತ್ಯ.... ಎಲ್ಲ ಭಾವನೆ ತುಂಬಾದ ಬರಹಗಳಿದ್ದು ಸುಲಲಿತ ನಿರೂಪಣೆ ಓದುಗರ ಮನ ಸೆಳೆಯುತ್ತದೆ. ನಾನು ಗುರುತಿಸಿದಂತೆ ಕೆಲವು ಕತೆಗಳ ಕುರಿತು ಅಭಿಪ್ರಾಯ-ನಿರ್ಧಾರ, ಪರಿವರ್ತನೆ, ಗಾಡಿ ತಡವಾಗಿ ಬಂತು... ಇವೆಲ್ಲ ಗಮನಾರ್ಹ ಕತೆಗಳೇ. ದ್ವಂದ್ವ ಚುಟುಕಾಗಿದ್ದರೂ ಅರ್ಥಪೂರ್ಣ. ಬೀಳ್ಕೊಡುಗೆಯು ಕಹಿ ವಾಸ್ತವದ ವ್ಯಂಗ್ಯವನ್ನು ತೆರೆದಿಟ್ಟಿದೆ’’.


ಈ ಕಥಾ ಸಂಕಲನದಲ್ಲಿ ಒಟ್ಟು 20 ಸಣ್ಣ ಕಥೆಗಳಿವೆ. ‘‘ನಿರೀಕ್ಷೆಯ ಹಾದಿಯಲ್ಲಿ’’ ಕಥೆಯ ಕೊನೆಯ ಪ್ಯಾರಾ ಹೀಗಿದೆ-‘‘ದೂರದಲ್ಲಿ ನೆಟ್ಟ ಅವಳ ನೋಟಕ್ಕೆ ಎದುರಾಗಿ ಕಾಂತರಾಜ ಬರುತ್ತಿರುವುದು ಕಂಡಾಗ ಸಂತಸದ ಕಡಲಾಗಿ ಉಕ್ಕಿ ಮನಸ್ಸು ಹರಿಯಿತು. ಬಲಗಿದ ಮಗುವನ್ನು ಮೆಲ್ಲಗೆ ಹಾಸಿಗೆಯಲ್ಲಿ ಮಲಗಿಸಿ ಅಂಗಳಕ್ಕೆ ಬಂದವಳು ತನ್ನ ಇನಿಯನನ್ನು ಎದುರುಗೊಳ್ಳಲು ಇದುವರೆಗೆ ಜಡ್ಡು ಹಿಡಿದಿದ್ದ ಕಾಲುಗಳು ಈಗ ಸರಸರನೆ ನಲ್ಲನತ್ತ ಸರಿದವು. ಭವಿಷ್ಯದ ಬಗ್ಗೆ ಕೇಳಲು ಮೈಯೆಲ್ಲ ಕಿವಿಯಾಗಿ ಅವನೆಡೆಗೆ ನಡೆದಳು.’’


–ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ.

## ಉಡುಪಿಯ ಶ್ರೀಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದಾ ದೇವಿಗೆ ನವರಾತ್ರಿ ಉತ್ಸವ ಶಾರದಾ ಮಂಟಪದಲ್ಲಿ ವಿಜಯದಶಮಿಯಂದು ಚಂಡಿಕಾಹೋಮ-ಯಕ್ಷಗಾನ

...1ನೇ ಪುಟದಿಂದ





ರಾವ್, ಡಾ| ಅವಿನಾಶ್ ಉಮೇಶ್ ರಾವ್, ಡಾ| ಲಕ್ಷ್ಮೀಶ ರಾವ್ ಅಲ್ಲದೇ ಇತರ ವೈದ್ಯರು ಸಹಕರಿಸಿದರು. **ಪ್ರಾರಂಭದಲ್ಲಿ ಸಂಘದ ಸಲಹೆಗಾರರೂ, ಮಾಜಿ ಅಧ್ಯಕ್ಷರೂ ಆದ ಡಾ| ಪಿ. ವಿಠಲರಾವ್ ಈ ಶಿಬಿರವನ್ನು ಉದ್ಘಾಟಿಸಿ ಶುಭ ಕೋರಿದರು.**

**ವಿಜೇತರಿಗೆ ಬಹುಮಾನ-ಉದಯಚಂದ್ರ ಪ್ರತಿಭಾ ಪುರಸ್ಕಾರ ಹಾಗೂ ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ :**

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಘದ ಸಲಹೆಗಾರರೂ, ಪೂರ್ವಾಧ್ಯಕ್ಷರೂ, ಆದ ಶ್ರೀ ಎಮ್. ಪಾಲಚಂದ್ರ ರಾಯರು ಭಾಗವಹಿಸಿ, ಬಹುಮಾನ ವಿತರಿಸಿದರು. ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಗೌತಮಿ ರಾವ್ ನಡೆಸಿದರು. ನಂತರ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್.ರಾವ್ ಎಲ್ಲರನ್ನೂ ಸ್ವಾಗತಿಸಿದರು. ನಿರ್ಲಿಪ್ತ ನಿರ್ಣಾಯಕರುಗಳಿಗೆ ಸ್ಮರಣಿಕೆಯನ್ನು ನೀಡಲಾಯಿತು. ಮುಖ್ಯ ಅತಿಥಿಗಳಾಗಿದ್ದ ಶ್ರೀ ಎಮ್. ಪಾಲಚಂದ್ರ ರಾಯರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಉದಯಚಂದ್ರ ಪ್ರತಿಭಾ ಪುರಸ್ಕಾರ, ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಯಿತು. ಅವರ ಹೆಸರುಗಳನ್ನು ಪ್ರಭಾಕರ ಭಂಡಿಯವರು ಪರಿಚಯಿಸಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಅವರ ಹೆಸರುಗಳನ್ನು ಕೃಷ್ಣ ಕುಮಾರ್ ಮಟ್ಟು ಸಭೆಗೆ ಓದಿ ಹೇಳಿದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾದ ಎಸ್.ಎಮ್.ರಾವ್, ಮುಖ್ಯಅತಿಥಿ ಎಮ್. ಪಾಲಚಂದ್ರ ರಾವ್ ಅಲ್ಲದೇ ಕಾರ್ಯದರ್ಶಿಯವರಾದ ಬಿ. ಕೃಷ್ಣಮೂರ್ತಿ ರಾವ್, ಕೋಶಾಧಿಕಾರಿ ಡಾ| ವೈ.ಸುದರ್ಶನ್ ರಾವ್, ಮಹಿಳಾ ವೇದಿಕೆಯ ಉಷಾ ಎನ್. ಶ್ಯಾನುಭಾಗ್ ಹಾಗೂ ಉಷಾ ಮೋಹನ್ ದೇವ್ ಉಪಸ್ಥಿತರಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ಬಿ. ಕೃಷ್ಣಮೂರ್ತಿರಾವ್ ಧನ್ಯವಾದವನ್ನಿತ್ತರು. ಕಾರ್ಯಕ್ರಮವನ್ನು ಜತೆ ಕಾರ್ಯದರ್ಶಿ ಅರವಿಂದಕುಮಾರ್ ನಿರೂಪಿಸಿ ದರು.

**ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕೃತರು :**

ಕು| ಅಪೂರ್ವರಾವ್, D/o ಬಿ.ವೆಂಕಟ್ರಾವ್, ವಾದಿರಾಜ ರಸ್ತೆ, ಉಡುಪಿ (M.A. English ನಲ್ಲಿ A+ ಗ್ರೇಡ್)

**ಉದಯಚಂದ್ರ ಪ್ರತಿಭಾ ಪುರಸ್ಕೃತರು :**

1) ಕು| ಪಲ್ಲವಿ ರಾವ್, D/o ಮಂಜುನಾಥ ರಾವ್, ಸುರತ್ಕಲ್ (SSLC-99.36%)
2) ರಜತ್ ಬಿ., S/o ಶಿವರಾಜ್, ಅಂಬಲ್ಪಾಡಿ, ಉಡುಪಿ (PUC Commerce-96%)
3) ಕು| ರಕ್ಷಿತಾ ಕೆ., D/o ಮೋಹನ್‌ಕುಮಾರ್ ಹೆಜಮಾಡಿ (PUC PCMB-92.5%)
4) ಆದರ್ಶ ಕೆ. ಕೆ., S/o ಕೆ. ಎಸ್. ಕೇಶವ ರಾವ್, ಕಾರ್ಕಳ (PUC PCMC-93.5%)
5) ಕು| ಪ್ರೀತಿಕಾ ಪಿಲಿಂಜ, D/o ತುಳಸೀದಾಸ್ ಮಂಗಳೂರು (LLB 1st Rank)

**ವಿವಿಧ ಸ್ಪರ್ಧೆಗಳ ವಿಜೇತರು :**

ಕಂಠಪಾಠ ಸ್ಪರ್ಧೆ (7ನೇ ತರಗತಿ ವರೆಗೆ) 1) ಸಹನಾ ಶಾಸ್ತ್ರಿ 2) ಸುದೇಷ್ಣಾ ರಾವ್ 3) ಎ. ಪಲ್ಲವಿ ರಾವ್

ಕಂಠಪಾಠ ಸ್ಪರ್ಧೆ (8ನೇ ತರಗತಿ ಮೇಲ್ಪಟ್ಟು) : 1) ವೈ. ಮಾನಸ ರಾವ್ 2) ರಕ್ಷಿತಾ ಕೆ. 3) ಅಶ್ವಿನಿ ಬಿ.ಹೆಬ್ಬಾರ್

ಭಕ್ತಿಗೀತೆ ಸ್ಪರ್ಧೆಗಳು : (4ನೇ ತರಗತಿ ವರೆಗೆ) 1) ಶರಣ್ಯ ರಾವ್ 2)ಪಲ್ಲವಿ ರಾವ್ 3) ಎಮ್.ಪ್ರೇರಣಾ ರಾವ್

ಭಕ್ತಿಗೀತೆ ಸ್ಪರ್ಧೆಗಳು : (5 ರಿಂದ 7 ತರಗತಿ ವರೆಗೆ) 1) ಸಹನಾ ಶಾಸ್ತ್ರಿ2) ಸುದೇಷ್ಣಾ ರಾವ್ 3) ಸ್ವಾತಿ

ಭಕ್ತಿಗೀತೆ ಸ್ಪರ್ಧೆಗಳು : (8ನೇ ತರಗತಿ ಮೇಲ್ಪಟ್ಟು) 1) ಸಾಗರ್ ಪಿ. 2) ವೈ. ಮಾನಸ ರಾವ್ 3) ಗೌತಮಿ ಕೆ.

ಹೂ ಜೋಡಿಸುವುದು : 1) ಕು| ಪ್ರಗತಿ ಬಂಡಿ 2) ಕೆ.ಮೋಹಿನಿ ಶಾಸ್ತ್ರಿ 3) ಶ್ರೀಮತಿ ರಾವ್

ರಂಗವಲ್ಲಿ (4ನೇ ತರಗತಿ ವರೆಗೆ) : 1) ಎಮ್.ಪ್ರೇರಣಾ ರಾವ್ 2) ಅಕ್ಷತಾ ಬಿ. ಹೆಬ್ಬಾರ್ 3) ಶರಣ್ಯ

ರಂಗವಲ್ಲಿ (5 ರಿಂದ 7 ತರಗತಿ ವರೆಗೆ) : 1) ಸುದೇಷ್ಣಾ ರಾವ್ 2) ವಿಪುಲ್ ರಾವ್ 3) ಅನುಷಾ

ರಂಗವಲ್ಲಿ (8ನೇ ತರಗತಿ ನಂತರ) : 1) ಭಾಗ್ಯಶ್ರೀ 2) ರಕ್ಷಿತಾ 3) ಅಶ್ವಿನಿ ಡಿ. ಹೆಬ್ಬಾರ್

ಚೂರ್ಣಿಕೆ ಹೇಳುವುದು : 1) ಅಶ್ವಿನಿ ಶಾಸ್ತ್ರಿ 2) ಗೌತಮಿ ಕೆ. 3) ವೈ. ಮಯೂರ ರಾವ್

ಚಿತ್ರಕಲೆ (4ನೇ ತರಗತಿ ವರೆಗೆ): 1) ಎಮ್.ಪ್ರೇರಣಾ ರಾವ್ 2) ಆದಿತ್ಯ ರಾವ್ 3) ಯಾಜ್ಞವಲ್ಕ್ಯ ಹೆಬ್ಬಾರ್

ಚಿತ್ರಕಲೆ (5 ರಿಂದ 7ನೇ ತರಗತಿ ವರೆಗೆ) : 1) ಸಹನಾ ಶಾಸ್ತ್ರಿ 2) ಸಿಂಚನ 3) ವಿಪುಲ್ ರಾವ್

ಚಿತ್ರಕಲೆ-ಪ್ರೋತ್ಸಾಹಕ ಬಹುಮಾನ (8ನೇ ತರಗತಿ ನಂತರ) : 1) ಶ್ರವಣ್ ಕುಮಾರ್ 2) ಯೋಗೀಶ್ ಹೆಬ್ಬಾರ್

ಛದ್ಮವೇಷ ಸ್ಪರ್ಧೆ (4ನೇ ತರಗತಿ ವರೆಗೆ) : 1) ದಿನೇಶ್ ರಾವ್ 2) ರೋಹನ್ 3) ರೋಹಿತ್

ಛದ್ಮವೇಷ ಸ್ಪರ್ಧೆ (5 ರಿಂದ 7ನೇ ತರಗತಿ) : 1) ಸಹನಾ ಶಾಸ್ತ್ರಿ2) ವಿಪುಲ್ ರಾವ್ 3) ಸ್ವಾತಿ

ಛದ್ಮವೇಷ ಸ್ಪರ್ಧೆ-ಪ್ರೋತ್ಸಾಹಕ ಬಹುಮಾನ (8-10ನೇ ತರಗತಿ): 1) ಶ್ರವಣ್ ಕುಮಾರ್

ತೀರ್ಪುಗಾರರಾಗಿ ಸಹಕರಿಸಿದವರು- ಶ್ರೀ ರಾಜೇಶ್ ಪಣಿಯಾಡಿ, ಅಧಿಕಾರಿಗಳು, ಮಾಹೆ, ಮಣಿಪಾಲ; ಶ್ರೀ ರವೀಂದ್ರ ರಾವ್, ಮುಖ್ಯ ಶಿಕ್ಷಕರು, ಎರ್ಮಾಳು ಬಡಾ ಸರಕಾರಿ ಪ್ರೌಢಶಾಲೆ, ಎರ್ಮಾಳು.

ನಮ್ಮ ಸಮಾಜದಿಂದ ತೀರ್ಪುಗಾರರಾಗಿ ಸಹಕರಿಸಿದವರು-ಕು| ಅಕ್ಷತಾ ರಾವ್, ಉದ್ಯಾವರ, ಅರುಣ್ ಬಿ.ರಾವ್ ಚಿಟ್ಪಾಡಿ, ಶ್ರೀಮತಿ ಮೀರಾ ರಾಜೇಶ್ ಚಿಟ್ಪಾಡಿ, ಶ್ರೀ ದಿನಮಣಿ ಶಾಸ್ತ್ರಿಬ್ರಹ್ಮಾವರ, ಡಾ| ರವೀಂದ್ರ ನಾಥ ರಾವ್ ಬ್ರಹ್ಮಾವರ, ಶ್ರೀ ಚಂದ್ರಕಾಂತ ರಾವ್ ಮೂಡುಬೆಳ್ಳೆ, ಶ್ರೀಮತಿ ವಿದ್ಯಾ ರವಿಶಂಕರ್ ಬೆಂಗಳೂರು, ಶ್ರೀಮತಿ ಸಂಗೀತ ರಾಘವೇಂದ್ರ ಹೆಬ್ಬಾರ್, ಶ್ರೀಮತಿ ಗೀತಾ ಕೃಷ್ಣಕುಮಾರ್ ಮಟ್ಟು

ಸ್ಪರ್ಧೆ ನಡೆಸಿ ಕೊಟ್ಟವರು-ಶ್ರೀ ಜಗದೀಶ್ ರಾವ್ ಟಿ. ಉಡುಪಿ, ಶ್ರೀ ವ್ಯಾಸರಾವ್ ಕಲ್ಮಂಜೆ, ಪವನ್‌ರಾವ್ ಚಿಟ್ಪಾಡಿ, ಕು| ವೃಂದಾ ಕೆ.ರಾವ್ ಮಟ್ಟು, ಕು| ಸ್ವಾತಿ ರಾವ್ ಟಿ.

ಅದೇ ದಿನ ಸಂಜೆ 6 ಗಂಟೆಗೆ ಸರಿಯಾಗಿ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಇವರಿಂದ "**ಮಹಿಷಾಸುರ ಮರ್ದಿನಿ**" ಎಂಬ ಯಕ್ಷಗಾನ ಬಯಲಾಟವು ಪ್ರದರ್ಶಿಸಲ್ಪಟ್ಟಿತು. ಇತ್ತೀಚಿನ ವರ್ಷಗಳಲ್ಲಿ ವಿಯಜದಶಮಿಯಂದು ಶ್ರೀ ಶಾರದಾ ದೇವಿಯ ಸನ್ನಿಧಿಯಲ್ಲಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಸಮಾಜದ ಹವ್ಯಾಸಿ ಕಲಾವಿದರು ಪ್ರತಿಬಾರಿಯೂ ಹೊಸ ಪ್ರಸಂಗವನ್ನು ಆಡಿ

(4ನೇ ಪುಟಕ್ಕೆ...)





**ಉಡುಪಿಯ ಶ್ರೀಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದಾ ದೇವಿಗೆ ನವರಾತ್ರಿ ಉತ್ಸವ ಶಾರದಾ ಮಂಟಪದಲ್ಲಿ ವಿಜಯದಶಮಿಯಂದು ಚಂಡಿಕಾಹೋಮ-ಯಕ್ಷಗಾನ** ...3ನೇ ಪುಟದಿಂದ

ಸಮಾಜ ಬಾಂಧವರ ಹಾಗೂ ಯಕ್ಷಗಾನ ಕಲಾವಿದರ ಮನಂರಂಜಿಸುತ್ತಿದ್ದಾರೆ.

ಹಿಮ್ಮೇಳದಲ್ಲಿ ಭಾಗವತರಾಗಿ:- 1. ಪ್ರವೀಣ ಕುಮಾರ್, ಕುಕ್ಕಿಕಟ್ಟೆ ; ಚಂದ್ರಕಾಂತ ರಾವ್ ಮೂಡುಬೆಳ್ಳೆ. ಮದ್ದಳೆ: ರತ್ನಾಕರ ಶೆಣೈ, ಉಡುಪಿ ಚೆಂಡೆ: ರತ್ನಾಕರ ಆಚಾರ್ಯ, ಶ್ರುತಿ : ಟಿ. ಸುರೇಶ ರಾವ್ ನಿಟ್ಟೂರು, ಮುಮ್ಮೇಳದಲ್ಲಿ : ಬಾಲ ಗೋಪಾಲರು- ಆದಿತ್ಯರಾವ್, ಪಲ್ಲವಿರಾವ್ ಪ್ರಾರ್ಥನೆ-ಶ್ರಾವ್ಯ ರವಿಶಂಕರ, ಬ್ರಹ್ಮ: ಅನುಶ್ರೀ, ವಿಷ್ಣು : ವಾಗೀಶ ರಾವ್ ನಿಟ್ಟೂರು ಈಶ್ವರ : ವೈಷ್ಣವಿ ಹೆಬ್ಬಾರ್, ಮಧು : ಟಿ ವಿಶ್ವನಾಥ ಶ್ಯಾನುಭಾಗ, ಕೈಟಭ : ವೈ. ಅಜಿತ ರಾವ್, ದೇವೇಂದ್ರ: ವ್ಯಾಸ ರಾವ್ ಕಲ್ಮಂಜೆ, ಅಗ್ನಿ: ಪ್ರೇರಣಾ ರಾವ್, ವಾಯು: ಕಾರ್ತಿಕೇಯ ಕೃಷ್ಣ, ಮಾಲಿನಿ: ವೃಂದಾ ಕೆ.ರಾವ್, ಸುಪಾರ್ಶ್ವಕ: ಪವನ್ ಕೆ.ರಾವ್ ಚಿಟ್ಪಾಡಿ, ವಿದ್ಯುನ್ಮಾಲಿ : ವಾಗೀಶ ಕಲ್ಮಂಜೆ, ಮಂತ್ರಿ: ಕಾರ್ತಿಕೇಯ ಸಿ. ದೂತ: ವಾಗೀಶ ರಾವ್, ನಿಟ್ಟೂರು, ಮಹಿಷಾಸುರ : ಕೃಷ್ಣ ಕುಮಾರ ಮಟ್ಟು ಪಿಂಗಳ ಯಕ್ಷ: ಕಾತೀಕೇಯ ಕೃಷ್ಣ, ಶಂಖಾಸುರ: ಅರವಿಂದ ಕುಮಾರ, ದುರ್ಗಾಸುರ: ಸಂತೋಷ ರಾವ್ ಮಣಿಪಾಲ, ಶ್ರೀ ದೇವಿ: ಸ್ವಾತಿ ರಾವ್ ನಿಟ್ಟೂರು, 2ನೇ ವಿಷ್ಣು: ಕಾರ್ತಿಕೇಯ ಸಿ., ಈ ಪ್ರಸಂಗದ ನಿರ್ದೇಶನ : ಮಂಜುನಾಥ ಕುಲಾಲ್, ಐರೋಡಿ ನಮ್ಮೊಂದಿಗೆ ಸಹಕಾರ: ಸತೀಶ ಭಟ್, ನಿಹಾಲ್ ಸಹಾಯ ಮತ್ತು ಸಹಕಾರ : ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಉಡುಪಿ ಕುಂಜಿಬೆಟ್ಟು, ಯಕ್ಷಗಾನ ಕೇಂದ್ರ ಎಂ.ಜಿಎಂ, ಉಡುಪಿ ಕುಂಜಿಬೆಟ್ಟು, ವೇಷಭೂಷಣ: ಗಜಾನನ ಯಕ್ಷಗಾನ ಕಲಾ ಮಂಡಳಿ, ಬ್ರಹ್ಮಾವರ

ಈ ಬಾರಿ ಯಕ್ಷಗಾನಕ್ಕೆ ಧನ ಸಹಾಯ ನೀಡಿ ಹಲವರು ಸಹಕರಿಸಿದ್ದಾರೆ. ಅವರಿಗೆ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕೃತಜ್ಞತೆ ಸಲ್ಲಿಸಿದ್ದಾರೆ. ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಡುಪಿ, ಶ್ರೀ ಬಿ. ಜಯರಾಮ ರಾವ್ ಉಡುಪಿ, ಸಂತೋಷ ರಾವ್ ಮಣಿಪಾಲ, ಬಿ. ಕೃಷ್ಣ ಮೂರ್ತಿರಾವ್, ಭುಜಂಗರಾವ್ ಚಿಟ್ಪಾಡಿ, ಪ್ರಪುಲ್ಲಚಂದ್ರ ರಾವ್, ಸಂತೋಷ ರಾವ್, ಚಿಟ್ಪಾಡಿ, ಸದಾಶಿವ ಶಾಸ್ತ್ರಿ ಉಷಾ ಶ್ಯಾನುಭಾಗ, ಯು ಅರವಿಂದ ಕುಮಾರ್, ನಿಹಾರಿಕಾ ರಾವ್, ಸರಸ್ವತಿ ರಾವ್, ಪ್ರಕಾಶ ಭಾಗವತ್ ಬಾರ್ಕೂರು, ವೀಣಾ ರಾವ್, ಬಾಲಚಂದ್ರ, ನಾರಾಯಣ ಶ್ಯಾನುಭಾಗ, ಸುಧಾಕರ ರಾವ್, ಭುವನೇಂದ್ರ ರಾವ್, ಕೆ. ವೇಣು ಗೋಪಾಲ ರಾವ್, ರವೀಂದ್ರ ರಾಜ ವರ್ಮ, ಚೈತ್ರಾ ರಾವ್, ವಿದ್ಯಾ ಎಸ್ ರಾವ್, ಡಾ. ವೈ ರವೀಂದ್ರನಾಥ ರಾವ್, ದೇವಿಪ್ರಸಾದ ಕೆ. ವಿಠಲ ರಾವ್, ಮುರಳೀಧರ, ಸುರೇಶ ರಾವ್ ಕುತ್ಪಾಡಿ, ವೈ. ಮೋಹನ ರಾವ್, ಕೆ ಗಣೇಶ ಹೆಬ್ಬಾರ, ಮಂಜುನಾಥ ಹೆಬ್ಬಾರ, ಪಲ್ಲವಿ ಸುಭಾಶ್ ರಾವ್, ಸದಾನಂದ ರಾವ್ ಚಿಟ್ಪಾಡಿ, ಟಿ.ಕೃಷ್ಣ ರಾಜ ಸಿಲ್ವಾಸ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಇತ್ತೀಚೆಗೆ ಕಟಪಾಡಿ ಸಾರ್ವಜನಿಕ ಗಣೇಶೋತ್ಸವದ ಸಂದರ್ಭದಲ್ಲಿ 'ಶ್ರೀ ಶಾರದಾ ಹವ್ಯಾಸಿ ಕಲಾವಿದರು' ಅವರ 4ನೇ ಪ್ರಯೋಗವಾದ 'ಜಾಂಬವತಿ ಕಲ್ಯಾಣ' ಪ್ರಸಂಗವನ್ನು ಆಡಿ ತೋರಿಸಿದ್ದಾರೆ. ಇವರ ಕಲೆಯನ್ನು ಮುಂದೆಯೂ ಸಮಾಜ ಬಾಂಧವರು ಗುರುತಿಸಿ ಪ್ರೋತ್ಸಾಹಿಸಬೇಕಾಗಿ ಅಧ್ಯಕ್ಷರು ಹಾಗೂ ಸಂಚಾಲಕರು ವಿನಂತಿಸಿದ್ದಾರೆ.

**-ಕಾರ್ಯದರ್ಶಿ**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು , ಉಡುಪಿ

## ವಿದ್ಯಾರ್ಥಿ ವೇತನ-2012

ನಮ್ಮ ಸಂಘದ ವತಿಯಿಂದ 2012ನೇ ಸಾಲಿನಲ್ಲಿ 128 ವಿದ್ಯಾರ್ಥಿಗಳಿಗೆ ರೂ.1,39,750 ವಿದ್ಯಾರ್ಥಿ ವೇತನವನ್ನು ಶ್ರೀಶಾರದಾ ಮಂಟಪ ಕುಂಜಿಬೆಟ್ಟು ಇಲ್ಲಿ ವಿತರಿಸಲಾಗಿದೆ. ಈ ಮೊತ್ತವು ಕಳೆದ ವರ್ಷ ನೀಡಲಾದ ಮೊತ್ತಕ್ಕಿಂತ ರೂ.60,000 ಜಾಸ್ತಿಯಾಗಿರುತ್ತದೆ.

**-ಕಾರ್ಯದರ್ಶಿ**

# 'ಚಾಟಿ - ಚಟಾಕಿ'-5

**- ಮಾರ್ಪಳ್ಳಿ ಆರ್ ಮಂಜುನಾಥ್**



"ಅಲ್ವೇ ನಮ್ಮ ಮಗನಿಗೆ ಏನು ಕಡಿಮೆ ಮಾಡಿದ್ದೀನಿ. ಕೇಳ್ಳೋಕೇಳ್ಳೋ ಆಟದ ಗೊಂಬೆ, ಫ್ಯಾನ್ಸಿ ಡ್ರೆಸ್‌ಗಳು, ಚ್ಯಾಕ್‌ಲೇಟ್‌ಗಳು, ಐಸ್‌ಕ್ರೀಂಗಳು! ಒಳ್ಳೆ ರಾಜಕುಮಾರನ್ನು ಬೆಳೆಸಿದ ಹಾಗೆ ಬೆಳೆಸಿದ್ದೇನೆ..... ಅಯ್ಯೋ ನನ್ನ ಬಾಲ್ಯದ ಕತೆ ಕೇಳಿದ್ದರೆ ಏನಂತಿಯೋ, ಏನೋ? ಒಂದೆರಡು ಜೊತೆ ನಿಕ್ಕರ್ ಶರ್ಟ್, ಯಾವತ್ತೋ ಏನೋ ಹಬ್ಬ ಹರಿದಿನಗಳಲ್ಲಿ ಪಾಯಸವೋ? ಸಿಹಿ ತಿಂಡಿಯೋ? ಅದನ್ನು ಬಿಟ್ರೆ ಬೇರೆ ದಿವಸ ಒಂದು ದಿನವೂ ಒಂದು ಸಿಹಿ ತಿಂಡಿ ಇಲ್ಲ. ಒಂದು ಹೊಸ ಬಟ್ಟೆ ಇರಲಿಲ್ಲ!" ಗಂಡ ಮಹಾಶಯ ಹೆಂಡ್ತಿ ಹತ್ತಿರ ಕೊಚ್ಚುಕೊಳ್ತಾ ಇದ್ದಾನೋ? ಅಥವಾ ತನ್ನ ದುಃಖ ತೋಡಿಕೊಳ್ಳುತ್ತಿದ್ದಾನೋ- ಅರ್ಥವಾಗ್ತಿಲ್ಲ.

ಇದೇನೋ ಇವನೊಬ್ಬನ ಮನೆಯ ವಿಷಯವಲ್ಲ. ಸಾಮಾನ್ಯವಾಗಿ ಶೇ.95% ರಷ್ಟು ಮಕ್ಕಳ ಮನೆಮನೆ ಕತೆ. ತಾವು ಮಕ್ಕಳಿಗೆ ಬೇಕುಬೇಕಾದನೆಲ್ಲ ತಂದುಕೊಡಿಸುತ್ತಿದ್ದೇವೆ. ತಮಗೆ ಇಲ್ಲದಿದ್ದರೂ ಪರವಾಗಿಲ್ಲ. ತಮ್ಮ ಮಕ್ಕಳು ಯಾವುದೇ ಕಷ್ಟ ವಿಲ್ಲದೆ ಸುಖವಾಗಿರಬೇಕು ಎನ್ನುವ ಮಹತ್ವಾಕಾಂಕ್ಷೆ.

"ಅಪ್ಪ, ಪಕ್ಕದ ಮನೆ ರಮೇಶನ ಅಪ್ಪ ಕ್ರಿಕೆಟ್‌ನ ಕಿಟ್ ಕೊಡಿಸಿದ್ದಾರೆ. ನನಗೂ ಕೊಡಿಸಪ್ಪ" "ಆಯ್ತು ಮರಿ ನಾಳೆನೇ ತಂದುಕೊಡ್ತೀನಿ, ಸಂತೋಷ ತಾನೇ" ಮಾತು ಕೊಟ್ಟ ಅಪ್ಪ ಮರೆಯದೆ ಮಾರನೇ ದಿನವೇ 3 ಸಾವಿರ ರೂ. ಕೊಟ್ಟು ವಿಕೆಟ್, ಕಾಲು, ಚೀಲ, ಬಾಲ್ ಎಲ್ಲ ಕ್ರಿಕೆಟಿನ ಐಟಂಗಳನ್ನು ತಂದುಕೊಟ್ಟಿದ್ದಾನೆ. ಎಂಥ ಅಪ್ಪ ! ಮಕ್ಕಳ ಮೇಲೆ ಎಷ್ಟು ಪ್ರೀತಿ! ಎಷ್ಟು ಕಾಳಜಿ!

ಕೆಲಸಕ್ಕೆ ಹೋಗುವ ಮಮ್ಮಿ ಎಷ್ಟೇ ಕಛೇರಿಯಲ್ಲಿ/ಕಂಪನಿಯಲ್ಲಿ ಕೆಲಸವಿರಲಿ, ಮನೆಗೆ ಬರುವಾಗ ತನ್ನ ಕಂದನ ಖುಷಿಗಾಗಿ, ಮಾರ್ಕೆಟ್‌ನಿಂದ ಸ್ವೀಟ್ಸ್ / ಚ್ಯಾಕುಲೇಟ್, ಯಾವುದಾದರೂ ಹೊಸದಾಗಿ ಬಂದ ಡ್ರೆಸ್‌ಗಳು/ಗೊಂಬೆಗಳು ತರುವುದನ್ನು ಮರೆಯುವುದೇ ಇಲ್ಲ.

ಮಕ್ಕಳಿಗಾಗಿ ತಂದೆ-ತಾಯಿಗಳು ಪಡುವ ಕಾಳಜಿ, ಪ್ರೀತಿ, ನೋವು, ನಲಿವುಗಳು ಲೆಖ್ಖಕ್ಕಿಡಲು ಸಾಧ್ಯವೇ ಇಲ್ಲ. ಇನ್ನೂ ಹೇಳಬೇಕೆಂದರೆ ವೀಕ್‌ಎಂಡ್‌ನಲ್ಲಿ ಪಿಕ್‌ನಿಕ್, ರಿಲೀಸ ಆಗುತ್ತಿರುವ ಹೊಸ ಸಿನಿಮಾಗಳು! ಮಕ್ಕಳ ಸಂತೋಷಕ್ಕೆ, ಸರ್ವಾಂಗೀಣ ಪ್ರಗತಿಗೆ ಇನ್ನೇನು ಬೇಕು ಅನಿಸುತ್ತದೆಯೇ?

ತಂದೆ-ತಾಯಿಗಳು ಮಕ್ಕಳ ಮೇಲೆ ಇರಿಸುವ ಕಾಳಜಿ ಮುಗಿಯಲಾರದ ಕತೆ, ಮೆಗಾ-ಧಾರವಾಹಿ.

ಆದರೆ ಈ ಕಾಳಜಿಯ ಮೆಗಾ ಧಾರವಾಹಿಯಲ್ಲಿ ಬಿಟ್ಟು ಹೋದ ದೊಡ್ಡ ಕೊಂಡಿಯೇ ಮಕ್ಕಳಿಗೆ ಒದಗಿಸದ ಸಾಹಿತ್ಯ. ಕೊಂಡುಕೊಡದ ಪುಸ್ತಕ! ಆಸಕ್ತಿ ಹುಟ್ಟಿಸದೇ ಕಡೆಗಣಿಸಿದ ಸಾಹಿತ್ಯ ಮೌಲ್ಯ.

ಬಾಲ್ಯದಲ್ಲಿ ಮಕ್ಕಳಿಗೆ ಕತೆ, ಕವನ, ಹಾಡುಗಳ ಅಭಿರುಚಿಯನ್ನೇ ಹುಟ್ಟಿಸದೇ ಇದ್ದರೆ, ಬೆಳೆಯುವ ಸಸಿಗೆ ಗೊಬ್ಬರವಿಲ್ಲದಂತೆ. ಸಾಹಿತ್ಯ ಸಮಾಜದ ಕಣ್ಣುಗಳಿದ್ದಂತೆ. ಕಣ್ಣಿಲ್ಲದೆ ಇರುವ ಕುರುಡನಂತೆ, ಸಾಹಿತ್ಯದ ಅಭಿಮಾನವಿಲ್ಲದವನು ಪಶುವಿಗೆ ಸಮಾನ. ಈ ಪ್ರಮುಖ ವಿಷಯವನ್ನೆ ಇಂದಿನ ತಂದೆ-ತಾಯಿಗಳು-ಪೋಷಕರು ಮರೆತಿರುವುದು. ಮಕ್ಕಳ ಭವಿಷ್ಯತನ ದೃಷ್ಠಿಯಲ್ಲಿ ಮಾಡುವ ಅಪಚಾರ.

ನೀತಿ ಶತಕವನ್ನು ಇಲ್ಲಿ ಉಲ್ಲೇಖಿಸುವುದು ಅನಿವಾರ್ಯವೆನಿಸುತ್ತದೆ.

"ಸಾಹಿತ್ಯ-ಸಂಗೀತ-ಕಲಾವಿಹೀನಃ
ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ
ತೃಣಂನ ಖಾದನ್ನಪಿ ಜೀವಮಾನಃ
ತದ್-ಭಾಗಧೇಯಂ ಪರಮಂ ಪಶೂನಾಂ"

ಬಬ್ಬ ಮಾನವ ಪರಿಪೂರ್ಣನಾಗುವುದು ಸಾಹಿತ್ಯ-ಸಂಗೀತ, ಕಲೆ, ವಿಜ್ಞಾನಗಳಿಂದ. ಕೇವಲ ಹಣ, ದುಡಿಮೆಯೇ ಜೀವನವಲ್ಲ. ಅಧಿಕಾರವೇ ಎಲ್ಲವೂ ಅಲ್ಲ.

ಕೇವಲ ಮನುಜ ಮಾತ್ರನಲ್ಲ, ಪಶು ಸರ್ಪ ಮೊದಲಾದವುಗಳು ಸಹ ಗಾನ ರಸಕ್ಕೆ ಮರುಳಾಗುತ್ತದೆ. ಅದನ್ನ "ಶಿಶುರ್ವೇತ್ತಿ, ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ' ಎನ್ನಲಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಮನೆಯಲ್ಲಿ ಕತೆಗಳನ್ನು ಹೇಳುವವರು ಇಲ್ಲ. ಕತೆಗಳನ್ನು ಹೇಳಲು ತಂದೆ ತಾಯಿಗಳಿಗೆ ಪುರುಸೋತ್ತು ಇಲ್ಲ. ಚಿಕ್ಕಂದಿನಲ್ಲಿಯೇ ಆ ಕೋಮಲ ಮಕ್ಕಳ ಮನದಲ್ಲಿ, ಹೃದಯದಲ್ಲಿ ಯಾಂತ್ರಿಕತೆಗಳನ್ನೆ ತುಂಬಿದರೆ ಹೇಗೆ? ಅವರಲ್ಲಿರುವ ಹಸಿರಾಗಿರುವ ಆದ್ರತೆಯನ್ನು ಬತ್ತಿ ಹೋಗುವಂತೆ ಮಾಡುವುದು ಸರಿಯೇ?

ಇದನ್ನೆ ನನ್ನದೊಂದು ಕವನದಲ್ಲಿ ಉಲ್ಲೇಖಿಸಿದ್ದೇನೆ. ಇದು ಕೆಲವು ಮಕ್ಕಳಿಗಾದರೂ ಅನಿಸಿರಬಹುದು.

ಮಕ್ಕಳ ಅಳಲು ಆಲಿಸಿ ಹಿರಿಯರೇ
ನಮಗೆ ಬೇಕು ಸಾಹಿತ್ಯ
ಬುದ್ಧಿ ರಂಜನೆ ಉಲ್ಲಾಸ ಕೊಡಲು
ಮಕ್ಕಳಿಗೆ ಬೇಕು ಸಾಹಿತ್ಯ.
ಮಕ್ಕಳಿಗೆ ಕತೆಯನು ಹೇಳುವವರಿಲ್ಲ
ಅಜ್ಜ ಅಜ್ಜಿ ಮನೆಯಲಿ ಇಲ್ಲ
ಶಾಲೆಯಲಿ ಪಾಠ ಬಿಟ್ಟರೆ ಇಲ್ಲ
ಮಕ್ಕಳಿಗೆ ಎಲ್ಲಿದೆ ಸಾಹಿತ್ಯ. (ಮಕ್ಕಳ ಅಳಲು - ಪದ್ಯ)

ನಮ್ಮ ಮಕ್ಕಳಿಗೆ ಬೇಕು ಬೇಕಾದ ಆಟಿಕೆ ವಸ್ತುಗಳು, ಡ್ರೆಸ್‌ಗಳು, ಚಾಕಲೇಟ್‌ಗಳು ಕಂಪ್ಯೂಟರುಗಳನ್ನು ಕೊಡಿಸುವ ನಾವುಗಳು ಅದಕ್ಕಿಂತ ಕಡಿಮೆ ಬೆಲೆಯ ಆದರೆ ಹೆಚ್ಚಿನ ಅನುಭವ-ಜ್ಞಾನ ಉಲ್ಲಾಸವನ್ನು ಕೊಡುವ ಮಕ್ಕಳ ಪುಸ್ತಕವನ್ನು ಏಕೆ ಕೊಡಿಸುವುದಿಲ್ಲ? ಏಕೆ ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವುದಿಲ್ಲ? ಏಕೆ ಉದಾಸೀನ ತೋರುತ್ತಿದ್ದೇವೆ? ಇದು ಸರಿಯೇ? ಈ ಪ್ರಶ್ನೆಗಳಿಗೆ ಹಿರಿಯರಾದ ನಾವುಗಳೇ ಉತ್ತರಿಸಬೇಕದೆ.

ಮನೆಯೇ ಮೊದಲ ಪಾಠಶಾಲೆ. ಜನನಿ ಜನಕ ಇವರೇ ಗುರುಗಳು ಮಾರ್ಗದರ್ಶಕರು. ಇವರು ಬೆಳೆಸಿದಂತೆ ಬೆಳೆಯುವ ಸಸಿಗಳೇ-ಈ ಮಕ್ಕಳು.

ಹಿರಿಯರು ಎಷ್ಟರ ಮಟ್ಟಿಗೆ ಸಾಹಿತ್ಯ-ಪುಸ್ತಕಗಳನ್ನು ಓದುತ್ತಿದ್ದಾರೋ? ಮನೆಯಲ್ಲಿ ಪುಟ್ಟ ಗ್ರಂಥಾಲಯವನ್ನು ಇಟ್ಟುಕೊಂಡಿದ್ದಾರೋ? ಎಷ್ಟು ಪತ್ರಿಕೆಗಳನ್ನು ತರಿಸುತ್ತಿದ್ದಾರೋ? ಅಥವಾ ಅವರ ಮನೋಗುಣಕ್ಕೆ ಪುಸ್ತಕಗಳನ್ನು ಸಂಗ್ರಹಿಸಿಕೊಂಡಿದ್ದಾರೋ? ಅದು ತಿಳಿಯದು.

ಆದರೆ ಮಕ್ಕಳಿಗಾಗಿ, ಮಕ್ಕಳ ಮನೋಗುಣಕ್ಕೆ ಅನುಗುಣವಾಗಿ ಮಕ್ಕಳ ಪುಸ್ತಕಗಳನ್ನು ತರಿಸಿಕೊಡಲಿ. ಮಕ್ಕಳ ಪುಟ್ಟ ಗ್ರಂಥಾಲಯ ಮನೆಯನ್ನು ಅಲಂಕರಿಸಲಿ. ಓದುವ, ಬರೆಯುವ ಸಾಹಿತ್ಯದ ಆಸಕ್ತಿ ತನ್ನಂತಾನೆಯೇ ಬೆಳೆಯುತ್ತದೆ.


"ಬಾಲ್ಯದೊಳ್ ಅಕ್ಷರಂ ಕಲಿಸದಿರ್ದೊಡೆ ಕೊಂದು, ಲಕ್ಕಧನವಿರಲು ಕೆಡುಗುಂ" ಎಂಬ ಶತಕ ಅಕ್ಷರ ಎನ್ನುವುದು ವಿಶಾಲ ದೃಷ್ಠಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಅ,ಆ,ಇ,ಈ ಎನ್ನುವ ಅಥವಾ ABCD ಎಂಬುದೇ ಅಕ್ಷರವಲ್ಲ, ಇದು ಮಕ್ಕಳಿಗೆ ನೀಡುವ ವಿದ್ಯೆ ಸಾಹಿತ್ಯ ಎಂಬ ಅರ್ಥವನ್ನು ಧ್ವನಿಸುತ್ತದೆ.

ಮಕ್ಕಳ ಸರ್ವಾಗೀಣ ಅಭಿವೃದ್ಧಿಯಲ್ಲಿ, ಮನೋವಿಕಾಸದಲ್ಲಿ, ಜ್ಞಾನದ ನೆಲೆಯಲ್ಲಿ ಮಕ್ಕಳಿಗೆ ಸಾಹಿತ್ಯದ ಕೊಡುಗೆ ಮಹತ್ವ ಪೂರ್ಣವಾಗಿದೆ. ಅದನ್ನೆ ಗೌಣವಾಗಿಸಿ ಉಳಿದ ಸೌಕರ್ಯಗಳನ್ನು ಒದಗಿಸಿದರೆ ಅದು ಅಪೂರ್ಣ, ಹಿರಿಯರಿಗೆ ಇದು ಅರ್ಥವಾದರೆ ಮಕ್ಕಳ ನಿಜವಾದ ಕಾಳಜಿ ಪೂರ್ಣವೆನಿಸುತ್ತದೆ.

ಮಕ್ಕಳ ಸಾಹಿತ್ಯ ಸಮೃದ್ಧಗೊಳ್ಳಲಿ
ಮಕ್ಕಳಿಗೆಸಿಗಲಿ ಸಾಹಿತ್ಯ.
ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು
ಎನ್ನುವ ಮಾತು ನೆನಪಿರಲಿ.

ಹಿರಿಯರೇ ಹಚ್ಚಿರಿ ಮಕ್ಕಳ ಮನದಲ್ಲಿ ಎಂದೂ ಆರದ ಸಾಹಿತ್ಯದೀಪ. ಅವರುಗಳ ಮನದಲ್ಲಿ ಶಾಶ್ವತವಾಗಿ ಬೆಳಗಿ ಅವರಿಂದರೂ ಮುಂದಿನ ಪೀಳಿಗೆಗೆ ಸಾಹಿತ್ಯದ ಅಭಿಮಾನವನ್ನು, ಆಸಕ್ತಿಯನ್ನು, ಅಭಿರುಚಿಯನ್ನು, ಬೆಳೆಗಿಸಲು ನಿಮ್ಮ ಕರ್ತವ್ಯ, ಜವಾಬ್ದಾರಿ ನಿಮ್ಮ ಮೇಲಿದೆ. ನಿಭಾಯಿಸುವ ಧರ್ಮವೂ ನಿಮ್ಮ ಮೇಲಿದೆ.

## ಅಪರೂಪದ ಯಕ್ಷಗಾನ ಕಲಾವಿದ ಶ್ರೀ ಜಗದಾಭಿರಾಮ ಸ್ವಾಮಿ, ಪಡುಬಿದ್ರಿ



ಯಕ್ಷಗಾನ ಕಲೆಯ ಬಗ್ಗೆ ವಿಶೇಷ ಬಲವನ್ನು ತೋರಿಸಿ ಈ ಕ್ಷೇತ್ರದಲ್ಲಿ ಸಾಧನೆ ಮಾಡಿ ಅಸಾಧಾರಣ ಪ್ರತಿಭೆಯನ್ನು ಪಡೆದವರು ಪಡುಬಿದ್ರಿ ಉದಯಾದ್ರಿ ಮಠದ ನಿವಾಸಿ ಶ್ರೀ ಜಗದಾಭಿರಾಮ ಸ್ವಾಮಿ. ಇವರು ಪಡುಬಿದ್ರಿಯ ದಿ. ಪಟ್ಟಾಭಿರಾಮಸ್ವಾಮಿ ಮತ್ತು ಶ್ರೀಮತಿ ವಸಂತಿಯವರ ಪ್ರಥಮ ಪುತ್ರ. ಇವರು ಎಳೆಯ ವಯಸ್ಸಿನಲ್ಲಿಯೇ (12ವರ್ಷ ಪ್ರಾಯ) ಧರ್ಮಸ್ಥಳ ಮೇಳದಲ್ಲಿ ಕಟ್ಟುವೇಷ ಹಾಗೂ ಸ್ತ್ರೀವೇಷಗಳಿಂದ ತಮ್ಮ ಯಕ್ಷಗಾನದ ಬದುಕನ್ನು ಪ್ರಾರಂಭಿಸಿದರು. ಅಲ್ಲಿ ಸುಮಾರು 7 ವರ್ಷ ದುಡಿದು ಬಪ್ಪನಾಡು ಮತ್ತು ಮರೂರು ಮೇಳಗಳಲ್ಲಿ ತಲಾ ಒಂದೊಂದು ವರ್ಷ ವೇಷ ಕಟ್ಟಿ ಕುಣಿದರು. ಬಳಿಕ ಕಟೀಲು ಮೇಳ ಸೇರಿ 6 ವರ್ಷಗಳ ಕಾಲ ಯಕ್ಷರಂಗದಲ್ಲಿ ಸಾಧನೆಯನ್ನು ಮಾಡಿದರು. ಇತ್ತೀಚೆಗೆ 7-8 ವರ್ಷಗಳಿಂದ ತಮ್ಮ ಜ್ಯೋತಿಷ್ಯ ಮತ್ತು ಅರ್ಚಕ ವೃತ್ತಿಯ ನಡುವೆ ಬಿಡುವು ಮಾಡಿಕೊಂಡು ಹೊಸನಗರ ಮತ್ತು ಎಡನೀರು ಮೇಳಗಳಲ್ಲಿ ಅತಿಥಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.


39 ವರ್ಷ ಪ್ರಾಯದ ಜಗದಾಭಿರಾಮ ಸ್ವಾಮಿಯವರು ಸುಮಾರು 28 ವರ್ಷಗಳ ಕಾಲ ಯಕ್ಷಗಾನದಲ್ಲಿ ಬರುವ ಪುಂಡುಮೇಳ, ಸ್ತ್ರೀವೇಷ, ಕಿರೀಟವೇಷ, ಬಣ್ಣದ ವೇಷ ಇತ್ಯಾದಿ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿ ಜನಮನ್ನಣೆಗಳಿಸಿದ್ದಾರೆ. ಇವರ ಪ್ರಿಯವಾದ ಪಾತ್ರಗಳೆಂದರೆ ದೇವಿ, ಮಹಿಷಾಸುರ, ಘೋರ ಹಿಡಿಂಬಿ ಇತ್ಯಾದಿ. ಇವರು ಯಕ್ಷಗಾನದಲ್ಲಿ ಯಾವ ಪಾತ್ರಕ್ಕೂ ಸೈ ಎನ್ನುವ ಪ್ರತಿಭಾನ್ವಿತ ಕಲಾವಿದ. ಶ್ರೀ ಕೆ. ಗೋವಿಂದ ಭಟ್ ಇವರ ಮಹಾನ್ ಕಲಾಗುರು. ಇವರ ಕ್ರಿಯಾಶೀಲತೆಗೆ ಭಾಗವತ ಶ್ರೀ ಕುರಿಯ ಗಣಪತಿ ಶಾಸ್ತ್ರಿಯವರ ಉತ್ತೇಜನವೇ ಕಾರಣ ಎಂದು ನೆನೆಸುತ್ತಾರೆ.

ಶ್ರೀ ವಿದ್ಯಾ ಕೊಳ್ಯೂರು ಇವರ ಯಕ್ಷಗಾನ ತಂಡದಲ್ಲಿ ಸೇರಿಕೊಂಡು ಉತ್ತರ ಭಾರತದ ವಾರಣಾಸಿ, ದೆಹಲಿ ಇತ್ಯಾದಿ ಕಡೆಗಳಲ್ಲಿ ಹಿಂದಿ ಭಾಷೆಯ ಯಕ್ಷಗಾನ ಪ್ರದರ್ಶನಗಳಲ್ಲಿ ಘೋರ ಶೂರ್ಪನಖಾ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದ ಹಿರಿಮೆ ಇವರದು. 18-7-2012ರಂದು ಮಂಗಳೂರು ಪುರಭವನದಲ್ಲಿ ಶ್ರೀ ಕೃಷ್ಣ ಯಕ್ಷ ಸಭಾ, ಮಲ್ಲಿಕಟ್ಟೆ, ಕದ್ರಿ, ಮಂಗಳೂರು ಇವರು ಉಡುಪಿ ಪೇಜಾವರ ಮಠಾಧೀಶರ ಸಮ್ಮುಖದಲ್ಲಿ ಗೌರವ ಪತ್ರವನ್ನಿತ್ತು ಸಮ್ಮಾನಿಸಿದ್ದಾರೆ.

ಶ್ರೀಯುತ ಜಗದಾಭಿರಾಮ ಸ್ವಾಮಿಯವರು ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಮೊಕ್ತೇಸರರು ಹಾಗೂ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕರು. ಇವರು ಪಡುಬಿದ್ರಿ ಉದಯಾದ್ರಿ ಮಠದವಾಸಿಯಾಗಿದ್ದು ಮಡದಿ ಶ್ರೀಮತಿ ನಾಗರತ್ನ ಮತ್ತು ಮೂವರು ಮಕ್ಕಳೊಂದಿಗೆ ವಾಸವಾಗಿದ್ದಾರೆ. ಖ್ಯಾತ ಉರಗತಜ್ಞ ಶ್ರೀ ನಯನಾಭಿರಾಮ ಸ್ವಾಮಿ ಇವರ ಅನುಜ, ಒಂದೇ ಮನೆಯಲ್ಲಿ ವಾಸವಾಗಿದ್ದಾರೆ

ಹೆಚ್ಚು ಪ್ರಚಾರ ಬಯಸದೆ ಎಲೆಮರೆಯ ಕಾಯಿಯಂತೆ ಯಕ್ಷರಂಗಕ್ಕೆ ತನ್ನ ಅಮೂಲ್ಯ ಕೊಡುಗೆಯನ್ನು ನೀಡುತ್ತಿರುವ ಈ ಉತ್ಸಾಹೀ ಕಲಾವಿದರಿಗೆ ಮುಂದೆಯೂ ಉಜ್ವಲ ಭವಿಷ್ಯ ದೊರಕಲಿ ಎಂದು ಹಾರೈಸೋಣ. ಇವರ ಚರ ದೂರವಾಣಿ ಸಂಖ್ಯೆ 9448626220.

**-ವೈ.ಮೋಹನ ರಾವ್,**
**ಎಚ್.ಎನ್.ಶ್ಯಾನುಭಾಗ್**



## ನಮ್ಮ ಸಮಾಜದ ಯುವ ಉರಗತಜ್ಞ ಶ್ರೀ ನಯನಾಭಿರಾಮ ಸ್ವಾಮಿ



ಸಾಮಾನ್ಯವಾಗಿ ಉರಗಗಳೆಂದರೆ ಹೆದರುವವರೇ ಜಾಸ್ತಿ. ಆದರೆ ಪಡುಬಿದ್ರಿಯ ಶ್ರೀ ನಯನಾಭಿರಾಮ ಸ್ವಾಮಿ ಇವರು ಇದಕ್ಕೆ ಅಪವಾದ ಎಂಬಂತೆ ಯಾವುದೇ ಉರಗಗಳನ್ನು ಬರಿಗೈಯಲ್ಲಿ ಹಿಡಿದು ಕಾಡಿಗೆ ಬಿಟ್ಟು ಜನರ ಆತಂಕವನ್ನು ಇಲ್ಲವಾಗಿಸುತ್ತಾರೆ.

ಇವರು ಪಡುಬಿದ್ರಿಯ ದಿ. ಪಟ್ಟಾಭಿರಾಮ ಸ್ವಾಮಿ ಮತ್ತು ಶ್ರೀಮತಿ ವಸಂತಿ ದಂಪತಿಗಳ ದ್ವಿತೀಯ ಪುತ್ರ ಹಾಗೂ ಯಕ್ಷಗಾನ ಕಲಾವಿದ ಶ್ರೀ ಜಗದಾಭಿರಾಮ ಸ್ವಾಮಿಯವರ ತಮ್ಮ. ಇವರು ತಮ್ಮ ತಂದೆಯಿಂದ ಕಲಿತ ಈ ವಿದ್ಯೆಯನ್ನು ಈಗ ತಮ್ಮ ಬಿಡುವಿನ ವೇಳೆಯಲ್ಲಿ ಯಾವ ಫಲಾಪೇಕ್ಷೆಯನ್ನು ಬಯಸದೆ, ಯಾರು ಯಾವಾಗ ಕರೆದರೂ ಉಪಯೋಗಿಸಿ ಜನಸೇವೆಯನ್ನು ಮಾಡುತ್ತಾರೆ. ಇವರ ಮುಖ್ಯ ಕಸುಬು ಕ್ಯಾಟರಿಂಗ ಮತ್ತು ಅರ್ಚಕವೃತ್ತಿ. ಮಡದಿ ಶ್ರೀಮತಿ ಸುಮಂಗಲ ಮತ್ತು ಇಬ್ಬರು ಮಕ್ಕಳೊಂದಿಗೆ ಪಡುಬಿದ್ರಿ ಉದಯಾದ್ರಿಯಲ್ಲಿ ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಪುತ್ತೂರಿನ ಖ್ಯಾತ ಉರಗತಜ್ಞ ಡಾ. ರವೀಂದ್ರನಾಥ ಐತಾಳರ ಮಾರ್ಗದರ್ಶನದಲ್ಲಿ ಇವರು ಈ ದಿಸೆಯಲ್ಲಿ ಬಹಳಷ್ಟು ಸಾಧನೆಗಳನ್ನು ಮಾಡಿದ್ದಾರೆ. ಅವರು ಉರಗಗಳನ್ನು ಕೊಲ್ಲುವುದಿಲ್ಲ ಬದಲಾಗಿ ಹಿಡಿದು ದೂರದ ಕಾಡಿನಲ್ಲಿ ಬಿಟ್ಟು ಬರುತ್ತಾರೆ. ಕೆಲವೊಮ್ಮೆ ಗಾಯಗೊಂಡ ಉರಗಗಳನ್ನು ತಂದು ಉಪಚರಿಸಿ ಬಳಿಕ ಕಾಡಿನಲ್ಲಿ ಬಿಟ್ಟ ಪ್ರಸಂಗಗಳು ಇವೆ. ಅವರು ಹೇಳುವಂತೆ ಉರಗಗಳು ನಿರುಪದ್ರವಿ ಜೀವಿಗಳು ಮತ್ತು ಅವುಗಳಿಗೂ ನಮ್ಮಂತೆ ಜೀವಿಸುವ ಹಕ್ಕಿದೆ. ಅವು ಪೆಟ್ಟಾದಾಗ ಅಥವಾ ಹೆದರಿಕೊಂಡಾಗ ಮಾತ್ರ ಆಕ್ರಮಣ ಮಾಡುತ್ತವೆ. ಪ್ರಕೃತಿಯ ಸಮತೋಲನ ಸ್ಥಿತಿಗೆ ಅವುಗಳ ಕೊಡುಗೆ ಅಪಾರ. ಆದುದರಿಂದ ಅವುಗಳ ರಕ್ಷಣೆ ನಮ್ಮ ಕರ್ತವ್ಯ.

ಅವರ ಮೊಬೈಲ್ ನಂಬರ್ 9449101303 ಇದ್ದು ಯಾರು ಯಾವಾಗ ಕರೆ ಮಾಡಿದರೂ ಸಹಾಯಕ್ಕೆ ತಾನು ಸಿದ್ಧ ಎಂದು ಆತ್ಮ ವಿಶ್ವಾಸದಿಂದ ನುಡಿಯುತ್ತಾರೆ ಈ ಉರಗತಜ್ಞ. ಹೀಗಾಗಿ ಪಡುಬಿದ್ರಿಯ ಪರಿಸರದಲ್ಲಿ ಯಾರೂ ಹಾವಿಗೆ ಹೆದರುವುದಿಲ್ಲ. ಅವರ ಮನೆಯವರಂತೂ ಮೊದಲೇ ಇಲ್ಲ ಶ್ರೀ ನಯನಾಭಿರಾಮ ಸ್ವಾಮಿಯವರು ತಾವಾಗಿ ಏನೂ ಪ್ರತಿಫಲಾಪೇಕ್ಷ ಮಾಡದಿದ್ದರೂ ಕೆಲವೊಮ್ಮೆ ಜನ ಪ್ರೀತಿ ಪೂರ್ವಕವಾಗಿ ಹಣ ನೀಡಿದಾಗ, ನಿರಾಕರಿಸಲಾಗದ ಮೃದುಮನಸ್ಸು ಇವರದ್ದು.

ಮಳೆಗಾಲದ ನೆರೆಗಳಲ್ಲಿ ಕೆಲ ಹಾವುಗಳು ಮನೆ ಸೇರುವುದು, ಕೋಳಿ ಗೂಡುಗಳಿಗೆ ಹೆಬ್ಬಾವುಗಳ ದಾಳಿಗಳನ್ನು ಬಿಟ್ಟರೆ ಸರಿಸೃಪಗಳು ತಮ್ಮ ಆಹಾರವನ್ನು ಅರಸಿ ಬೇಸಗೆ ಕಾಲದಲ್ಲೇ ಮನೆಗೆ ನುಗ್ಗುವುದು ಜಾಸ್ತಿ ಎಂಬುದು ನಯನಾಭಿರಾಮ ಸ್ವಾಮಿಯವರ ಅನುಭವದ ಮಾತಾಗಿದೆ.

ಇವರ ಸೇವೆಯನ್ನು ಪ್ರಶಂಸಿಸಿ ಉದಯವಾಣಿ ದಿನಾಂಕ 6-7-2011ರಂದು ಸಚಿತ್ರ ಲೇಖನವನ್ನು ಪ್ರಕಟಿಸಿತ್ತು. ಅಲ್ಲದೆ ಪಡುಬಿದ್ರಿ, ರೋಟರಿ ಜೆ.ಸಿ.ಸಿ ಮತ್ತು ಲಯನ್ಸ ಸಂಸ್ಥೆಗಳು ಇವರನ್ನು ಗೌರವಿಸಿವೆ. ಸ್ಥಳೀಯ ಶಾಲೆ, ಬಿ.ಜೆ.ಪಿ ಶಕ್ತಿ ಕೇಂದ್ರ, ಪಡುಬಿದ್ರಿಯವರೂ ಇವರ ಸೇವೆಯನ್ನು ಗುರುತಿಸಿದ್ದಾರೆ. ಶಾಲೆಗಳಲ್ಲಿ ಮಕ್ಕಳಿಗೆ ಉರಗಗಳ ಬಗ್ಗೆ ಪ್ರಾತ್ಯಕ್ಷಿಗೆ ಮೂಲಕ ಅಮೂಲ್ಯ ಮಾಹಿತಿಗಳನ್ನು ಇವರು ನೀಡಿದ್ದಾರೆ. ಮಾನವೀಯ ದೃಷ್ಟಿಯಿಂದ ಆತಂಕದ ಸಮಯದಲ್ಲಿ ಸಹಾಯ ಹಸ್ತ ನೀಡುವ ಇವರ ಗುಣ ಸ್ತುತ್ಯರ್ಹ.

ಈ ಧೈರ್ಯವಂತ, ಗಟ್ಟಿಗ, ಸ್ನೇಹಶೀಲ ಯುವಕ ನಯನಾಭಿರಾಮ ಸ್ವಾಮಿ ಅಲ್ಲೊಂದು ಇಲ್ಲೊಂದು ಹಾವು ಕಾಣಸಿಕ್ಕಿದಾಗ ನಮಗೆ ಬೇಕೆ ಬೇಕೆನಿಸುತ್ತದೆ.

**-ವೈ.ಮೋಹನ ರಾವ್**
**ಎಚ್.ಎನ್.ಶ್ಯಾನುಭಾಗ್**



# ವೇದಗಣಿತದ ಪರಿಚಯ

-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್., ಕಾರ್ಪೋರೇಶನ್ ಬ್ಯಾಂಕ್



(ಹಿಂದಿನ ಸಂಚಿಕೆಯಿಂದ...)

ಮೂರನೇ ಸೂತ್ರ-ಉರ್ಧ್ವ ತಿರ್ಯಗ್ ಭ್ಯಮ್, CÜd {V`½â`m_ (Vertically and Cross Wise)

ಉದಾಹರಣೆ 14 :

1. ಪ್ರಶ್ನೆ: 74 x 83 $\times \frac{74}{83}$ ಈ ಸೂತ್ರದಲ್ಲಿ ಕೆಳಗೆ ಮತ್ತು ಮೇಲೆ ಬರೆದ ಅಂಕೆಯನ್ನು ಗುಣಿಸಿ ಬರೆಯಬೇಕು. $\times \frac{74}{83}$ ರಲ್ಲಿ 7x8=56

ಇನ್ನೊಂದು ಬದಿಯಲ್ಲಿ 4x3=12 ಮತ್ತೆ ಇತರ ಮಧ್ಯೆ Crossನಲ್ಲಿ ಗುಣಿಸಿ ಅದನ್ನು ಕೂಡಿಸಿ ಮೇಲೆ ಬರೆದ ಸಂಖ್ಯೆಯನ್ನು ಕೂಡಿಸಬೇಕು. ( $\times \frac{74}{83}$ ರಲ್ಲಿ 8x4=32 + 7x3=21, 32+21=53. ಈ ಉತ್ತರ 56 (53) 12=6142 ಮೊತ್ತದ ಮೊದಲಿನ ಅಂಕೆಯನ್ನು ಮೊದಲು ಗುಣಿಸಿದ ಸಂಖ್ಯೆಗೆ 2ನೇ ಅಂಕೆಯನ್ನು ಮತ್ತೆ ಗುಣಿಸಿದ ಸಂಖ್ಯೆಗೆ ಕೂಡಿಸಬೇಕು.

2. ಪ್ರಶ್ನೆ: 93 x 29 = $\times \frac{93}{29}$ 9x2=18, (2x3=6+9x9=81=87), 9x3=27 = 18(87)27 = 2697 ಉತ್ತರ=2697

3. ಪ್ರಶ್ನೆ: 29 x 89 = $\times \frac{29}{89}$ 16 (72+18) 81=16(90)81 ಉತ್ತರ=2581

4. ಪ್ರಶ್ನೆ: 64 x 52 = 6x5=30, (20+12) 4x2=08 (4X5+2X6) =30(32)08 = 3328 ಉತ್ತರ=3328

5. ಪ್ರಶ್ನೆ: 95 x 24 = 9x2=18, (10+36) 4x5=20 (46) =18(46)20 = 2280 ಉತ್ತರ=2280

ಉದಾಹರಣೆ 15 :

9+0=9, 8+1=9, 7+2=9, 6+3=9, 5+4=9, 4+5=9, 3+6=9, 2+7=9, 1+8=9, 0+9=9 9ರಿಂದ ಗುಣಿಸಿದರೆ ಬರುವ ಉತ್ತರದ ಅಂಕೆಗಳು ಮೊತ್ತ 9ರಿಂದ ಭಾಗಿಸಲ್ಪಡುತ್ತವೆ. ಯಾವುದೇ ಸಂಖ್ಯೆಯನ್ನು 9ರಿಂದ ಭಾಗಿಸುವಾಗ ಮೊದಲನೆ ಅಂಕೆಯನ್ನು ಶೇಷ ಅಂತ ಇಟ್ಟುಕೊಂಡು ಪ್ರಶ್ನೆ 1ರಲ್ಲಿ '5'ನ್ನು ಉಳಿದ **9)12345** ಅಂಕೆಯನ್ನು ಹಾಗೆಯೇ ಕೆಳಗೆ ಬರೆದು '1234' ಆಮೇಲೆ ಒಂದೊಂದೆ ಸ್ಥಾನಕ್ಕೆ ಕೂಡಿಸಿ ಕೆಳಗೆ ಬರೆಯಬೇಕು. 1+2+3='6', 1+2='3', ಆಮೇಲೆ ಕೊನೆಯ ಅಂಕೆ '1' ಇದನ್ನು '1234'ಕ್ಕೆ ಕೂಡಿಸಬೇಕು. ಅದೇ ರೀತಿ ಶೇಷದ ಬದಿಗೆ '5'ಕ್ಕೆ 1+2+3+4ನ್ನು ಸೇರಿಸಬೇಕು. '5+10'=15 ಇದನ್ನು 9ರಿಂದ ಬಂದ ಒಂದನ್ನು ಮೇಲಿನ ಉತ್ತರವಾದ 1370ಕ್ಕೆ ಸೇರಿಸಬೇಕು ಶೇಷ 15-9=6

1. ಪ್ರಶ್ನೆ: 9)12345 = 9) 1234 | 5
ಉತ್ತರ : 1371
ಶೇಷ 6

```
9)| 1 2 3 4 | 5
    1 2 3 4 |   5+1+2+3+4=15
          6 |   9|15
     13     |      9
  ----------     ---
    1 3 7 0 | 6    6
         +1 |
  ----------
    1 3 7 1 | ಶೇಷ 6
```

2. ಪ್ರಶ್ನೆ: 9)1024 = 9) 102 | 4
ಉತ್ತರ : 113
ಶೇಷ 7

```
9)| 1 0 2 | 4
    1 0 2 | 4+2+1=7
        1 |
      1   |
  ---------
    1 1 3 | ಶೇಷ 7
```

3. ಪ್ರಶ್ನೆ: 9)912= 9) 91 | 2
ಉತ್ತರ : 113
ಶೇಷ 7

```
9)| 9 1 | 2
    9 1 | 2+1+9=12
      9 | 9|12
  -------
  1 0 0 | 1-3
      1 |
  -------
  1 0 1 | ಶೇಷ 3
```

4. ಪ್ರಶ್ನೆ: 9)822 = 9) 82 | 2
ಉತ್ತರ : 91
ಶೇಷ 3

```
9)| 8 2 | 2
    8 2 | 2+8+2=12
      8 | 9|12
  -------
    9 0 | 1-3
      1 |
  -------
    9 1 | ಶೇಷ 3
```

5. ಪ್ರಶ್ನೆ: 9)240 =9) 24 | 0
ಉತ್ತರ : 91
ಶೇಷ 3

```
9)| 2 4 | 0
    2 4 | 0+4+2=6
      2 |
  -------
    2 6 | ಶೇಷ 6
```

ಉದಾಹರಣೆ 16 :

ಯಾವುದೇ ಸಂಖ್ಯೆಯ ಯಾವುದೇ ಸ್ಥಾನದ ಅಂಕೆಗಳು ಒಂದೇ ಇದ್ದಾಗ (ಪ್ರಶ್ನೆ 1ರಲ್ಲಿ ಮೊದಲ ಅಂಕೆ '5' ಒಂದೇ ಇದೆ.)

ಇಲ್ಲಿ ಮೊದಲು 4ನ್ನು 6ರಿಂದ ಗುಣಿಸಿ ಮೊತ್ತವನ್ನು 100ರಿಂದ ಗುಣಿಸಬೇಕು. 4x6=24x100=2400. ಆಮೇಲೆ 4+6ನ್ನು ಕೂಡಿಸಿ 10ರಿಂದ ಗುಣಿಸಿ ಮೊದಲನೇ ಅಂದರೆ ಒಂದೇ ರೀತಿಯಲ್ಲಿ ಇದ್ದ ಅಂಕೆಯಿಂದ ಗುಣಿಸಿಬೇಕು. 4+6=10x10=100x5=500, ಆಮೇಲೆ ಒಂದೇ ರೀತಿಯಲ್ಲಿ ಅಂಕೆಯನ್ನು ಗುಣಿಸಬೇಕು. 5x5=25, ಇನ್ನು ಉತ್ತರವನ್ನೆಲ್ಲ ಕೂಡಿಸಬೇಕು. 2400+500+25=2925

1. ಪ್ರಶ್ನೆ: 45x65
4x6x100 = 2400
4+6x10x5 = 500
5x5 = 25
ಉತ್ತರ 2925

2. ಪ್ರಶ್ನೆ: 41 x 81
4x8x100 = 3200
4+8x10x1 = 120
1x1 = 1
ಉತ್ತರ 3321

3. ಪ್ರಶ್ನೆ: 32 x 82
3x8x100 = 2400
3+8x10x2 = 220
2x2 = 4
ಉತ್ತರ 2624

4. ಪ್ರಶ್ನೆ: 37 x 47
3x4x100 = 1200
3+4x10x7 = 490
7x7 = 49
ಉತ್ತರ 1739

5. ಪ್ರಶ್ನೆ: 26 x 22
2x2x100 = 400
6+2x10x2 = 160
6x2 = 12
ಉತ್ತರ 572


6. ಪ್ರಶ್ನೆ: 53 x 57
5x5x100 = 2500
3+7x10x5 = 500
3x7 = 21
ಉತ್ತರ 3021

7. ಪ್ರಶ್ನೆ: 78 x 71
7x7x100 = 4900
8+1x10x7 = 630
8x1 = 8
ಉತ್ತರ 5538

**ತಿಂಗಳ ಪ್ರಶ್ನೆ: ಒಂದು ದಡದಲ್ಲಿ 4 ಜನ ಇದ್ದಾರೆ. ಅವರಿಗೆ ಹೊಳೆಯ ಇನ್ನೊಂದು ಬದಿಗೆ ಹೋಗಬೇಕು. ಒಂದು ದೋಣಿಯಲ್ಲಿ ಒಮ್ಮೆಗೆ 2 ಜನ ಹೋಗಬಹುದು. 4 ಜನರಲ್ಲಿ ಒಬ್ಬನಿಗೆ '1' ಮಿನಿಟ್‌ನಲ್ಲಿ ಆಚೆ ದಡಕ್ಕೆ ಹೋಗಬಹುದು. ಇನ್ನೊಬ್ಬನಿಗೆ '2' ಮಿನಿಟ್, 3ನೇಯವನಿಗೆ '5' ಮಿನಿಟ್‌ಬೇಕು, 4ನೇಯವನಿಗೆ '10' ಮಿನಿಟ್. ಆದರೆ 4 ಜನರಿಗೂ 17 ಮಿನಿಟ್‌ನಲ್ಲಿ ಆಚೆ ದಡಕ್ಕೆ ಹೋಗಬೇಕು. ಹೇಗೆ? ಉತ್ತರ ನಿರೀಕ್ಷಿಸಿ.**

# ಕನ್ನಡ ಕವಿಕಾವ್ಯ ಪರಿಚಯ-೪ : ಭಕ್ತ ಕವಿ ಪುರಂದರ ದಾಸರು

- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.



(ಕಳೆದ ಸಂಚಿಕೆಯಿಂದ)

ಪುರಂದರದಾಸರದ ಕೀರ್ತನೆಗಳಲ್ಲಿ ಅಪಾರ ಕಾವ್ಯ ಸೌಂದರ್ಯವನ್ನು ಕಾಣಬಹುದಾಗಿದೆ. ಅಂಕಿತ, ರಾಗ, ತಾಳ, ಲಯ ಹಾಗೂ ಭಾವಗಳ ಬಗ್ಗೆ ವಿಶೇಷ ಗಮನಹರಿಸಿದ್ದಾರೆ. ಮೋಕ್ಷಮಾರ, ಹರಿಸ್ಮರಣೆ, ನಾಮದ ಮಹತ್ವ, ಸೇವಾ ಭಾವನೆ, ಭಜನೆ ಮುಂತಾದುವುಗಳನ್ನು ದಾಸ ಸಾಹಿತ್ಯವು ವರ್ಣಿಸುತ್ತದೆ. ಸುಂದರವಾದ ಶಬ್ದ ಪ್ರಯೋಗ, ಸುಂದರವಾದ ಶೈಲಿ, ಮಾಧುರ್ಯ, ಸುಕುಮಾರತೆ, ಇತ್ಯಾದಿಗಳಿಂದ ಆನಂದ, ರೋಗ ಪರಿಹಾರ, ಮನಸ್ಸಿನ ಉಲ್ಲಾಸ, ಕಷ್ಟ ಪರಿಹಾರ ಮುಂತಾದುವುಗಳನ್ನು ಪುರಂದರದಾಸರು ಚೆನ್ನಾಗಿ ವಿವರಿಸಿದ್ದಾರೆ. 'ಕಲ್ಲು ಸಕ್ಕರೆ ಕೊಳ್ಳಿರೋ', 'ಮುತ್ತು ಕೊಳ್ಳಿರೋ', 'ಧರ್ಮವೇ ಜಯವೆಂಬ ದಿವ್ಯ ಮಂತ್ರ', ಮುಂತಾದ ರೂಪಕಗಳು ತುಂಬಾ ಮನೋಜ್ಞವಾಗಿವೆ. 'ನಿಂದಕರಿರಬೇಕು', 'ಎಳ್ಳು ಕಾಳಿನಷ್ಟು ಭಕ್ತಿ', 'ಋಣವೆಂಬ ಪಾತಕವು', 'ಜಾಲಿಯ ಮರದಂತೆ ದುರ್ಜನರು', ಮೊದಲಾದ ಉಪಮೆಗಳೂ, 'ಈಸಬೇಕು ಇದ್ದು ಜೈಸಬೇಕು', 'ಮಾನವ ಜನ್ಮ ದೊಡ್ಡದು', 'ಇದು ಭಾಗ್ಯವಯ್ಯ', 'ನಗೆಯು ಬರುತಿದೆ ಎನಗೆ', 'ಆಚಾರವಿಲ್ಲದ ನಾಲಗೆ', ಈ ರೀತಿಯ ಪದಗಳಲ್ಲಿ ಲೋಕದ ಡೊಂಕನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಸ್ವಲ್ಪದರದಲ್ಲಿಯೇ ಬಹು ವಿಷಯವನ್ನು ನೆನಪಿಸುವಂತೆ ಶ್ರೀಹರಿಯ ವರ್ಣನೆಗಳಲ್ಲಿ 'ನೀನ್ಯಾಕೋ ನಿನ್ನ ಹಂಗ್ಯಾಕೋ', 'ಕೃಷ್ಣಾ ಎನಬಾರದೇ', 'ಹರಿಕುಣಿದಾ', 'ಕಂಡೆನಾ ಗೋವಿಂದನಾ', 'ದೇವಕಿ ನಂದನ ಹರಿ', 'ದೇವಬಂದಾ ನಮ್ಮ' ಮುಂತಾದ ಪದ್ಯಗಳಲ್ಲಿ ಶ್ರೀಹರಿಯ ರೂಪಗಳನ್ನು ವರ್ಣಿಸಿದ್ದೇ ಅಲ್ಲದೇ ಈ ಪದ್ಯಗಳೆಲ್ಲವೂ ಕನ್ನಡಿಗರ ಮನೆ ಮಾತಾಗಿದೆ.

ಭಕ್ತಿಯ ವಿವರಣೆ ಇವರ ಕೀರ್ತನೆಗಳಲ್ಲಿ ತುಂಬಾ ಚೆನ್ನಾಗಿದೆ. 'ನಾ ನಿನ್ನೊಳನ್ನ ಬೇಡುವುದಿಲ್ಲ', 'ತೇಲಿಸೋ ಇಲ್ಲ ಮುಳುಗಿಸೋ', 'ನಿನ್ನನಾಶ್ರಯಿಸುವೆ', 'ನೀನೆ ಗತಿ ನೀನೆ ಮತಿ', 'ಬಿಡೆ ನಿನ್ನ ಪಾದವ', 'ಬಿನ್ನಹಕೆ ಬಾಯಿಲ್ಲವಯ್ಯ', 'ಶ್ರೀನಿವಾಸ ನೀನೇ ಪಾಲಿಸೊ' ಮುಂತಾದ ಪದ್ಯಗಳು ಇದನ್ನು ಸಾರುತ್ತವೆ. ಡಾಂಭಿಕ ಭಕ್ತಿಯನ್ನು 'ಉದರ ವೈರಾಗ್ಯವಿದು' ಎಂದು ಟೀಕಿಸಿದ್ದಾರೆ. 'ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಿದಂತಿದೆ', 'ಕಂಡೆ ನಾ ಕನಸಿನಲಿ ಗೋವಿಂದನ', 'ಕಂಡೆ ಕರುಣಾನಿಧಿಯ' ಎಂಬುದಾಗಿ ದೇವರ ಸಾಕ್ಷಾತ್ಕಾರವನ್ನು ಕುರಿತು ವಿವರಿಸಿದ್ದಾರೆ. 'ಶಿವರಾತ್ರಿಯಂದು ಶಿವ ದರ್ಶನವು ಎನಗಾಯಿತು', 'ಚಂದ್ರಚೂಡ ಶಿವ ಶಂಕರ ಪಾರ್ವತಿ ರಮಣಾ' ಎಂದು ಹಾಡಿ ಹರಿಹರರಲ್ಲಿ ಭೇದವಿಲ್ಲವೆಂಬುದನ್ನು ಸಾರಿದ್ದಾರೆ. 'ಮಂದ ಮತಿ ನಾನು ಮದನ ಜನಕ ನೀನು' ಎಂದು ಹಾಡಿ, 'ದೀನ ನಾನು ಸಮಸ್ತ ಲೋಕಕೆ ದಾನಿ ನೀನು' ಎಂಬ ಕನಕದಾಸರ ಉಕ್ತಿಯನ್ನು ಜ್ಞಾಪಿಸಿದ್ದಾರೆ. 'ನಾ ನಿನ್ನ ಧ್ಯಾನದೊಳಿರಲು ಮಿಕ್ಕ ಹೀನ ಮಾನವರೇನು ಮಾಡಬಲ್ಲರು?' ಎಂದು ಪ್ರಶ್ನಿಸಿದ್ದಾರೆ.

(ಮುಂದುವರಿಯುವುದು)

# ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್ ಅವರಿಗೆ "ರಂಗದಸರಾ"ದಲ್ಲಿ ಸನ್ಮಾನ



ಮೈಸೂರಿನ ದಸರಾ ಮಹೋತ್ಸವದ ಸಂದರ್ಭದಲ್ಲಿ ಆಯುಧ ಪೂಜೆಯ ದಿನದಂದು ಮೈಸೂರಿನ ರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥೆಯು ತನ್ನ ಬೆಳ್ಳಿ ಹಬ್ಬದ ಅಂಗವಾಗಿ ಮೈಸೂರಿನ ನಮ್ಮ ಸಮಾಜ ಬಾಂಧವರಾದ ನಾಟ್ಯಾಚಾರ್ಯ ಪ್ರೊ ಕೆ. ರಾಮಮೂರ್ತಿ ರಾವ್ ಅವರನ್ನು ಶಾಲು ಹೊದಿಸಿ ತಾಮ್ರ ಪತ್ರ ನೀಡಿ ಸನ್ಮಾನಿಸಿತು ಚಿತ್ರದಲ್ಲಿ ಪ್ರಖ್ಯಾತ ಚಿತ್ರಸಾಹಿತಿ ಸಂಗೀತ ನಿರ್ದೇಶಕ ಹಂಸಲೇಖ, ಚಿತ್ರನಟ ಮಂಡ್ಯ ರಮೇಶ ಮತ್ತಿತರರು ಇದ್ದಾರೆ.

**-ನಿರ್ಮಲ ಹರಿಕೃಷ್ಣ ರಾವ್**

# ಚಂದದಿ ನಡೆದ ಚಂಡಿಕಾಯುಗ

ನವರಾತ್ರಿ ಬಂತೆಂದರೆ ಎಲ್ಲೆಡೆ ದುರ್ಗಾ ಪೂಜೆಯ ಸಂಭ್ರಮ. ಆ ಸಂಭ್ರಮಕ್ಕೆ ಮೆರಗು ನೀಡಿದ ಚಂದದ ಚಂಡಿಕಾಯಾಗ ಕೆಮ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ದೇಗುಲದಲ್ಲಿ ನಡೆಯಿತು. ಬೆಂಗಳೂರಿನ ಕತ್ರಿಗುಪ್ಪೆಯಲ್ಲಿ ವಾಸವಾಗಿರುವ ಶ್ರೀ ದೀಪಕ್ ಕುಮಾರ್ ಕೆಮ್ಮಣ್ಣು ವೃತ್ತಿಯಲ್ಲಿ ಇಂಜಿನಿಯರ್ ಆದರೆ ಪ್ರವೃತ್ತಿಯಲ್ಲಿ ಸಮಾಜ ಸೇವಕ, ದೈವಭಕ್ತ ಮತ್ತದಕ್ಕಿಂತಲೂ ಮುಖ್ಯವಾಗಿ ಮಾತಾಪಿತೃಭಕ್ತ. ಅವರ ಅರ್ಧಾಂಗಿ ಶ್ರೀಮತಿ ಪ್ರೀತಿಯ, ಪ್ರೀತಿಯ ಹೊಳೆಯಲ್ಲಿ ಮಿಂದು ಸಂಸಾರ ವೃದ್ಧಿಗಾಗಿ ಪಡೆದ ಕು. "ಸಿದ್ಧಿ" ಹಾಲುಗಲ್ಲದ ಹಸುಳೆ. ಮಗುವಿನ ಶ್ರೇಯೋಭಿವೃದ್ಧಿಗಾಗಿ ಇದೇ ನವರಾತ್ರಿಯ ಶುಭಾವಸರದಲ್ಲಿ ಚಂಡಿಕಾಯಾಗ ಹಮ್ಮಿಕೊಂಡಿದ್ದರು. ದುರ್ಗಾದೇವಿ ಮಂದಿರವಾಗಿದ್ದರಿಂದ ಅಂದು ಸೇರಿದ ಸಾವಿರಾರು ಮಂದಿ ಈ ಪವಿತ್ರ ಕಾರ್ಯದ ಸಾರ್ಥಕತೆಗೆ ಸಾಕ್ಷಿಯಾದರು. ಅವರ ತಂದೆ ಅನಿಲ್ ಕುಮಾರ್ ಕೆಮ್ಮಣ್ಣು, ತಾಯಿ ಶ್ರೀಮತಿ ಪದ್ಮಿನಿಯವರ ನಗುಮೊಗದಲ್ಲಿ ಲಾಸ್ಯವಾಡುತ್ತಿದ್ದ ಕೃತಜ್ಞತೆಯ ಭಾವವೇ ಚಂಡಿಕಾಯಾಗಕ್ಕೆ ಚಂದ ತಂದಿತ್ತು. ಪುರೋಹಿತ ವೃಂದಕ್ಕೆ ಗೌರವಾರ್ಪಣೆ, ಕನ್ನಿಕಾ ಮುತ್ತೈದೆ ಪೂಜೆ, ಸುಮಂಗಲೀ ಪೂಜೆ ಮಾಡಿ ದಂಪತಿಗಳು ಪುನೀತರಾದರು.

**ಶ್ರೀಮತಿ ಸಾವಿತ್ರಿ ಮನೋಹರ್**
ಶಂಕರ ಪ್ರತಿಷ್ಠಾನ, ಕಾರ್ಕಳ

# ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಪಡುಬಿದ್ರಿಯಲ್ಲಿ ನವರಾತ್ರಿ ಉತ್ಸವ

ತುಲಾ ಮಾಸ ದಿನ 6 ಸಲುವ ಅಶ್ವೀಜ ಶುದ್ಧ 8ಯು ತಾ.22-10-2012ನೇ ಸೋಮವಾರ ದುರ್ಗಾಷ್ಟಮಿಯೆಂದು ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ವರ್ಷಪ್ರತಿಯಂತೆ ಚಂಡಿಕಾ ಹೋಮವು ವಿಜೃಂಭಣೆಯಿಂದ ಜರಗಿತು. ಚಂಡಿಕಾ ಹೋಮವು ಮಧ್ಯಾಹ್ನ 12.30ಕ್ಕೆ ಪೂರ್ಣ ಆರತಿಯೊಂದಿಗೆ ಸಂಪನ್ನಗೊಂಡಿತು. ಪರಿಸರದ ಭಕ್ತಾದಿಗಳು ಅಧಿಕಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದವನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು.

**- ಶ್ರೀ ಜಗದಾಭಿರಾಮ ಸ್ವಾಮಿ**

*Krishna Rao*
Ph : 2520652
Mob. : 9902029048
**KISHAN**
**Studio & Video**
**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.

# ಪ್ರತಿಭಾನ್ವಿತ ಶಿಕ್ಷಕಿ ಶ್ರೀಮತಿ ಸಾವಿತ್ರಿ ಮನೋಹರ್‌ಗೆ ಸನ್ಮಾನ



"ಮಕ್ಕಳ ಭವಿಷ್ಯ ತರಗತಿಯ 4 ಗೋಡೆಗಳೊಳಗೆ ರೂಪಿಸಲ್ಪಡುತ್ತದೆ ಎಂಬುವುದು ಹಿಂದೆ ಇದ್ದ ಮಾತು. ಆದರೆ ಇಂದು ಮಗು ಕೊಠಡಿಯ ಒಳಗೆ ಮಾತ್ರವಲ್ಲದೇ ತನ್ನ ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ ಸರ್ವತೋಮುಖ ಅಭಿವೃದ್ಧಿಯೊಂದಿಗೆ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕೇವಲ ಪಾಠ ಬೋಧನೆಯಲ್ಲದೆ ಅದರೊಂದಿಗೆ ಸ್ಕೌಟ್, ಗೈಡ್, ಶಿಕ್ಷಣ, ಸಾಹಿತ್ಯ ಕಮ್ಮಟಗಳ ಮೂಲಕ ಮಕ್ಕಳಿಗೆ ಸಾಹಿತ್ಯ ಬರೆಯುವ ಪ್ರೋತ್ಸಾಹ, ಪರಿಸರದಲ್ಲಿ ಪ್ರಕೃತಿ ವೀಕ್ಷಣೆಗೆ ಕರೆದೊಯ್ದು ಪ್ರಕೃತಿಯಲ್ಲಿರುವ ಸಸ್ಯ, ಪ್ರಾಣಿ ಸಸ್ಯಗಳ ಪರಿಚಯ ಮಾಡಿಸುವುದು, ಸಂಘ ಸಂಸ್ಥೆಗಳ ಮೂಲಕ ಶಾಲೆಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು ಮತ್ತು ಸಾಮಾಜಿಕ ಕಳಕಳಿಯೊಂದಿಗೆ ಸಮಾಜದ ಜೊತೆ ಉತ್ತಮ ಬಾಂಧವ್ಯ ಹೊಂದಿರುವುದು ಒಬ್ಬ ಯಶಸ್ವಿ ಶಿಕ್ಷಕನ ಲಕ್ಷಣವಾಗಿರುತ್ತದೆ. ಈ ಎಲ್ಲಾ ಲಕ್ಷಣಗಳು ಶ್ರೀಮತಿ ಸಾವಿತ್ರಿ ಮನೋಹರ್‌ರವರಲ್ಲಿದೆ ಎಂಬುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ. ಅವರನ್ನು ಸನ್ಮಾನಿಸುವ ಮೂಲಕ ರೋಟರಿಯಂತಹ ಸಂಘ ಸಂಸ್ಥೆಗಳು ತಾವು ಗೌರವಕ್ಕೆ ಪಾತ್ರವಾಗಿವೆ" ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಸ್.ಎಸ್. ಶಿಂಧಾರವರು ನುಡಿದರು.

ಅವರು ಕಾರ್ಕಳ ರೋಟರಿ ಕ್ಲಬ್‌ನ ವತಿಯಿಂದ ಹಮ್ಮಿಕೊಂಡ ಸನ್ಮಾನ ಸಮಾರಂಭದಲ್ಲಿ ಸರಕಾರಿ ಪ್ರೌಢಶಾಲೆ ನಿವೃತ್ತ ರಾಜ್ಯ ಪ್ರಶಸ್ತಿ ವಿಜೇತ ಮುಖ್ಯ ಉಪಾಧ್ಯಾಯಿನಿ ಶ್ರೀಮತಿ ಸಾವಿತ್ರಿ ಮನೋಹರ್ ಅವರನ್ನು ಸನ್ಮಾನಿಸಿ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು.

**- ಕೃತಿ, ಹೊಸನಗರ**

# ಶ್ರೀ ಎಮ್.ಆರ್.ವಾಸುದೇವ್-ಸೇವೆಯಿಂದ ನಿವೃತ್ತಿ



ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ದೇಶಕ ಶ್ರೀ ಎಮ್.ಆರ್. ವಾಸುದೇವ ಇವರು ತಾ.31-10-2012 ರಂದು ಸೇವಾ ನಿವೃತ್ತಿ ಹೊಂದಿದರು.

ಮಂಗಳೂರು ವಿಮಾನ ನಿಲ್ದಾಣದ ಅಭಿವೃದ್ಧಿಗೆ ಮತ್ತು ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತರುವಲ್ಲಿ ಇವರ ಕೊಡುಗೆ ಅಪಾರ. ರನ್‌ವೇ ವಿಸ್ತರಣೆ, ಸಂಪರ್ಕ ರಸ್ತೆಗಳ ಅಭಿವೃದ್ಧಿ ಜಮೀನು ಲಭ್ಯತೆಯ ಪ್ರಕ್ರಿಯೆ, ಕಾರ್ಗೋ ನಿರ್ವಹಣೆಯ ಜವಾಬ್ದಾರಿ ಇವುಗಳಲ್ಲಿ ಇವರ ಅವಿರತ ಶ್ರಮ ಅಡಗಿದೆ. ಸದಾ ಹಸನ್ಮುಖಿ ಹಾಗೂ ಉತ್ಸಾಹದ ಚಿಲುಮೆಯಾಗಿರುವ ವಾಸುದೇವ ಇವರ ಯಶಸ್ಸಿಗೆ ಅವರ ನಿಸ್ವಾರ್ಥ ಸೇವೆಯೇ ಕಾರಣ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಯಶಸ್ವಿ ಅಖಿಲ ಭಾರತ ಸ್ಥಾನಿಕ ಸಮಾವೇಶ 2012ರ ರೂವಾರಿಯಾಗಿಯೂ, ಗೌರವಾಧ್ಯಕ್ಷರಾಗಿಯೂ ಬಳಿಕ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಳಿಯ ಗೌರವಾಧ್ಯಕ್ಷರಾಗಿಯೂ ಸಲ್ಲಿಸಿದ ಇವರ ಸೇವೆ ಅಮೋಘ.

ಇವರ ವಿಶ್ರಾಂತಿ ಜೀವನ ಸುಖಮಯವಾಗಲಿ ಎಂದು ಶ್ರೀ ಶಾರದೆಯಲ್ಲಿ ನಮ್ಮೆಲ್ಲರ ಪ್ರಾರ್ಥನೆ.

**- ಎಚ್. ಎನ್. ಶ್ಯಾನುಭಾಗ್**

# ಶ್ರೀ ಕ್ಷೇತ್ರ ಪಾವಂಜೆಯಲ್ಲಿ ಯಕ್ಷಗಾನ ಬಯಲಾಟ

ಕಲಾಪೋಷಣೆಯ ಉದ್ದೇಶದಿಂದ ಕ್ಷೇತ್ರದ ಶ್ರೀ ಶಾರಧ್ವತ ಯಜ್ಞಾಂಗಣದ ನವೀಕೃತ ವೇದಿಕೆಯಲ್ಲಿ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ, ಪುತ್ತೂರು ಇವರಿಂದ ಶ್ರೀಯುತ ಶ್ರೀಧರ ಭಂಡಾರಿಯವರ ನೇತೃತ್ವದಲ್ಲಿ "ಶಶಿಪ್ರಭಾ ಪರಿಣಯ-ಭಾರ್ಗವ ವಿಜಯ" ಎಂಬ ಕಲಾಕುಸುಮವನ್ನು ತಾ.12-08-2012ರಂದು ಸಂಜೆ 4ರಿಂದ 8ರ ವರೆಗೆ ಯಕ್ಷಗಾನ ಬಯಲಾಟ ರೂಪದಲ್ಲಿ ಸಮರ್ಪಿಸಲಾಯಿತು. ಜಡಿಮಳೆಯ ದಿನಗಳಾದರೂ, ಆಸಕ್ತ ಪ್ರೇಕ್ಷಕ ವರ್ಗದಿಂದ ತುಂಬಿದ ಸಭೆಯಲ್ಲಿ ತಂಡವು ಉತ್ತಮ ಪ್ರದರ್ಶನ ನೀಡಿ ಪ್ರಶಂಸೆ ಗಳಿಸಿತು. ಶ್ರೀಯುತ ಕುಕ್ಕಿಕಟ್ಟೆ ಭೋಜರಾಯರು ಹಾಗೂ ಶ್ರೀ ಎಂ.ಶಶೀಂದ್ರ ಕುಮಾರ್‌ರವರು ಕಲಾವಿದರನ್ನು ಪ್ರತ್ಯೆ ಪ್ರತ್ಯೇಕವಾಗಿ ವಸ್ತ್ರ ಕೊಟ್ಟು ಗೌರವಿಸಿದರು. ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಶ್ರೀ ಅಣ್ಣಪ್ಪಯ್ಯ ಯುವ ವೇದಿಕೆ ಕಾರ್ಯಕ್ರಮವನ್ನು ಪ್ರಾಯೋಜಿಸಿತ್ತು.

-ಸ್ಕಂದಸ್ವಾಮಿ, ಮುಕ್ಕ

## ಪಾವಂಜೆ : "ಸಂಯಮಂ ಯಕ್ಷಗಾನ ತಾಳಮದ್ದಳೆ"-ಗಂಗಾಸಾರಥ್ಯ

ಕಲಾಪೋಷಣೆಯ ಉದ್ದೇಶದಿಂದ ಕ್ಷೇತ್ರದ ಶ್ರೀ ಶಾರಧ್ವತ ಯಜ್ಞಾಂಗಣದಲ್ಲಿ ಸಪ್ಟೆಂಬರ್ ತಿಂಗಳ ಕಾರ್ಯಕ್ರಮವಾಗಿ ಸಂಯಮಂ ಇವರ ಶ್ರೀಯುತ ಎಂ. ವಾಸುದೇವ ಸಾಮಗರ ನೇತೃತ್ವದಲ್ಲಿ ತಂಡದಿಂದ ತಾ.16-09-2012ರಂದು ಸಂಜೆ 4ರಿಂದ 8-45ರ ವರೆಗೆ "ಗಂಗಾ ಸಾರಥ್ಯ" ಯಕ್ಷಗಾನ ತಾಳಮದ್ದಳೆಯನ್ನು ಹಮ್ಮಿಕೊಳ್ಳಲಾಯಿತು. ತಾಳಮದ್ದಳೆ ಕ್ಷೇತ್ರದ ದಿಗ್ಗಜರಾದ ವಾಸುದೇವ ಸಾಮಗರ ಗಂಗಾ ಪಾತ್ರದೊಂದಿಗೆ, ವಿಶಿಷ್ಟವಾದ ಅಪರೂಪದ ಪ್ರಸಂಗವು ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಹಿಮ್ಮೇಳದಲ್ಲಿ ಭಾಗವತರಾದ ಶ್ರೀ ಗಣೇಶ ಹೆಬ್ರಿಯವರು ತಮ್ಮ ಉತ್ತಮವಾದ ಕಂಠಸಿರಿಯಿಂದ ಪ್ರೇಕ್ಷಕರ ಮನಸೂರೆಗೊಂಡರು. ಕಾರ್ಯಕ್ರಮವನ್ನು ಅಣ್ಣಪ್ಪಯ್ಯ ಯುವ ವೇದಿಕೆಯ ಸದಸ್ಯರು ಪ್ರಾಯೋಜಿಸಿ ಸಹಕರಿಸಿದರು.

-ಸ್ಕಂದಸ್ವಾಮಿ, ಮುಕ್ಕ

## ಪಡುಬಿದ್ರಿ ಪಾದೆಬೆಟ್ಟಿನಲ್ಲಿ ಶ್ರೀ ಚಂಡಿಕಾಯಾಗ

ಪಡುಬಿದ್ರಿ ಪಾದೆಬೆಟ್ಟು ಶ್ರೀಮತಿ ವಿಜಯ ಲಕ್ಷ್ಮೀ ಹಾಗೂ ಪಿ.ದೇವರಾಯ ಶರ್ಮ ದಂಪತಿಗಳು ತಾ.27-10-2012ರಂದು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿದೇವರ ಸನ್ನಿಧಿಯಲ್ಲಿ ಬಂಧುಬಾಂಧವರನ್ನು ಒಡಗೂಡಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಶ್ರೀ ಚಂಡಿಕಾ ಯಾಗವನ್ನು ನೆರವೇರಿಸಿದರು.

- ಪಿ. ದೇವರಾಯ ಶರ್ಮ

## ಗೃಹಪ್ರವೇಶ

ಉಡುಪಿಯ ಶ್ರೀಮತಿ ಭಾರತಿ ಮತ್ತು ಶ್ರೀ ಎ. ಕೃಷ್ಣರಾವ್ ಇವರು ಪುತ್ತೂರು ಸುಬ್ರಹ್ಮಣ್ಯ ನಗರದಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಶ್ರೀ ವರಕೃಪಾ' ಇದರ ಪ್ರವೇಶೋತ್ಸವವನ್ನು ತಾ.18-10-2012ರಂದು ನೆರವೇರಿಸಿದರು.

## ಶುಭ ಜನನ

ಉಡುಪಿ ಬೈಲೂರಿನಲ್ಲಿರುವ ಶ್ರೀಮತಿ ಗೀತಾ ಮತ್ತು ದಿ| ವೈ.ಸದಾಶಿವ ರಾಯರ ಪುತ್ರ ವೈ. ರಾಜೇಶ್ ರಾವ್ ಮತ್ತು ಶ್ರೀಮತಿ ಸ್ವಾತಿ ರಾವ್ (ಕುಂದೇಶ್ವರ ಶ್ರೀಮತಿ ಯಶೋಧ ಹಾಗೂ ಶ್ರೀ ನಾರಾಯಣ ಹೆಬ್ಬಾರರ ಪುತ್ರಿ) ಇವರಿಗೆ ತಾ.12-10-2012ರಂದು ಗಂಡು ಮಗುವಿನ ಜನನ.

## ನಾಮಕರಣ ಕಾರ್ಯಕ್ರಮ

ಧರ್ಮಸ್ಥಳ ಅಲಂಗಾರು ಶ್ರೀ ಸಚಿನ್ ಹಾಗೂ ಶ್ರೀಮತಿ ಅರ್ಚನಾ ದಂಪತಿಗಳ ಹೆಣ್ಣು ಮಗು (ದೃತಿಯ) ನಾಮಕರಣವನ್ನು ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾ.28-10-2012ರಂದು ಬಂಧುಬಾಂಧವರೊಡಗೂಡಿ ನೆರವೇರಿಸಿದರು.

## ನಿಧನ

### ಶ್ರೀಮತಿ ಗಿರಿಜಮ್ಮ

ಕಾರ್ನಾಡು ದಿ| ಸದಾಶಿವರಾಯರ ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ ಇವರು ತಾ.13-10-2012ರಂದು ತಮ್ಮ 81 ವಯಸ್ಸಿನಲ್ಲಿ ನಿಧನರಾದರು. ಇವರು ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★★

### ಕೆ. ವನಜಾಕ್ಷಿಯಮ್ಮ

ಕರ್ವಾಲು ದಿ| ಕೃಷ್ಣರಾಯರ ಪತ್ನಿ ಶ್ರೀಮತಿ ಕೆ. ವನಜಾಕ್ಷಿಯಮ್ಮ (85 ವರ್ಷ) ಅವರು ತಾ.17-10-2012ರಂದು ನಿಧನರಾದರು. ಇವರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, 13 ಮಂದಿ ಮೊಮ್ಮಕ್ಕಳು, 12 ಮಂದಿ ಮರಿಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ. ಇವರು ತಮ್ಮ ಜೀವಿತ ಕಾಲದಲ್ಲಿ ಪ್ರಪೌತ್ರ, ಶಾಂತಿ, ದರ್ಶನ, ಹೋಮವನ್ನು ವೀಕ್ಷಿಸಿದ ಪುಣ್ಯವಂತೆ.

★★★★

### ಮೋಹಿನಿ ಬಿ. ರಾವ್

ಉಡುಪಿ ಮೆಜೆಸ್ಟಿಕ್ ಪ್ರೆಸ್ ಮಾಲಕರೂ, ಶ್ರೀಕೃಷ್ಣ ಪಂಚಾಂಗ ಮತ್ತು ಮೆಜೆಸ್ಟಿಕ್ ಕ್ಯಾಲೆಂಡರ್‌ಗಳ ಪ್ರಕಾಶಕರೂ ಆದ ದಿ| ಭಾಸ್ಕರ ರಾಯರ ಪತ್ನಿ ಮೋಹಿನಿ ಬಿ.ರಾವ್ (70 ವರ್ಷ) ನವಂಬರ್ 7ರಂದು ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

# ಅವಸರದ ಅವಾಂತರಗಳು

- ವೈ. ಮೋಹನ ರಾವ್

ಅವಸರ ಮಾಡಕೂಡದು ಮೆಲ್ಲಗೆ ಎಲ್ಲೂವೂ ಸಾಧ್ಯವಿದೆ. ತೋಟದಾಳ ನೂರು ಗೊಡ ನೀರು ಒಂದೇ ಸಲ ಹಾಕಿದ್ರೂ ಋತು ಬಂದ ನಂತರವೇ ಫಲ ಸಿಗುತ್ತದೆ. ಎಂಬ ಅಮೃತವಾಣಿಯಿದೆ. ಸರಿ, ಹಾಗಾದರೆ ಎಷ್ಟೇ ಅವಸರ ಮಾಡಿದ್ರೂ ಫಲ ಸಿಗುವ ಸಮಯದಲ್ಲೇ ಸಿಗುವುದು. ಗೀತೆ ಕೂಡಾ ಹೇಳಿದ್ದು ಅದನ್ನೇ. ಕರ್ಮವನ್ನು ಮಾಡು ಫಲವನ್ನು ಅಪೇಕ್ಷಿಸಬೇಡ. ಹಾಗಾದರೆ ಅವಸರವು ನಿಶ್ಪ್ರಯೋಜಕ. ಅವಸರ ಮಾಡಿದ್ರೆ ಅದೇ ಇದೆಯೆಲ್ಲಾ ಹಲವಾರು ಅವಾಂತರಗಳು. ಆಂಗ್ಲ ನಾಣ್ನುಡಿಯೇ ಇದೆಯಲ್ಲಾ-ಅವಸರದ ಪರಿಣಾಮ ಅವಾಂತರ. ಎಲ್ಲಾ ಕೆಲಸವನ್ನು ಹಾಳು ಮಾಡುತ್ತದೆ ಈ ಅವಸರ.

ಕ್ರೀಡಾಪುಟಗಳಿಗೆ ಅನ್ವಯವಾಗುವ ಒಂದು ಸುಂದರ ನಾಣ್ನುಡಿಯಿದೆ. ಮೆಲ್ಲಗೆ ಮತ್ತು ಜಾಗೃತನಾಗಿದ್ದರೆ ಜಯ ಖಂಡಿತ. ಇದು ಕೇವಲ ಕ್ರೀಡಾರಂಗದಲ್ಲಿ ಮಾತ್ರವಲ್ಲ ನಮ್ಮ ದಿನನಿತ್ಯದ ಜೀವನದಲ್ಲೂ ಕ್ಷ-ಕಿರಣ ಬೀರಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಬಾಳಿನ ವಿಜಯದ ರಹಸ್ಯವೂ ಇದೇ. ಅಂದರೆ ಅವಸರ ಮಾಡಕೂಡದು, ತಾಳ್ಮೆಯಿಂದಿರಬೇಕು. ತಾಳ್ಮೆಯಿದ್ದರೆ ಬೆಟ್ಟದಷ್ಟು ಕಷ್ಟವನ್ನು ಎದುರಿಸಬಹುದು ಅಂತ ಬಾಪೂಜೀ ಕೂಡಾ ಹೇಳಿದ್ದಾರೆ. ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು-ಪುರಂದರದಾಸರ ಸೊಲ್ಲು ಅದೇ ತಾನೇ.

ಅವಸರ ಪಡಬೇಡಿ, ನಂತರ ಬೇಸರ ಪಡಬೇಡಿ ಎಂದು ಯಾವ ಆಧುನಿಕ ಕವಿಯೂ ಹಾಡಿದ್ದನ್ನ, ಅಲ್ಲ ಬರೆದದ್ದನ್ನ ನಾ ಕಾಣೆ (ಅಯ್ಯೋ! ನಾನು ಕಾಣೆಯಲ್ಲ. ಕಾಣೆಯಾಗುತ್ತಿದ್ರೆ ಕಾಣೆಯಾಗಿದ್ದಾನೆ ಅಂಥ ಬರುತ್ತೆ ಜಾಹೀರಾತು ವಾರ್ತಾ ಪತ್ರಿಕೆಯಲ್ಲಿ)

ಅದೇನೇ ಇರಲಿ ಅವಸರ ಎಂದೊಡನೆ ನನಗೆ ಹಿಂದೆ ಓದಿದ ಒಂದು ಸಣ್ಣ ಕಥೆ ನೆನಪಾಗುತ್ತದೆ. ಒಬ್ಬ ಎಬ್ಸೆಂಟ್ ಮೈಂಡೆಡ್ ಪ್ರೊಫೆಸರ್ ಇದ್ರು. ಅವರಿಗೆ ಒಂದು ಮೊಟ್ಟೆ ಬೇಯಿಸಬೇಕಾಗಿತ್ತು. ಅದನ್ನ ಇಷ್ಟೇ ನಿಮಿಷಗಳೊಳಗೆ ಬೇಯಿಸಬೇಕಾಗಿತ್ತು. ಅವರು ವಾಚನ್ನು ತಗೊಂಡು ಅದನ್ನು ಬೇಯಿಸಲು ಹಾಕಿದ್ರು ಮತ್ತು ಮೊಟ್ಟೆಯನ್ನು ಹಿಡಿದುಕೊಂಡು ಸಮಯ ನೋಡತೊಡಗಿದರು. ಇದು ಎಬ್ಸೆಂಟ್ ಮೈಂಡ್‌ನೆಸ್ ಅಲ್ಲ, ಅವಸರದ ಅವಾಂತರ ಎಂದು ನನ್ನ ಅಭಿಪ್ರಾಯ.

ಇನ್ನು ಎಲ್ಲಿಯಾದ್ರೂ ಅವಸರದಲ್ಲಿ ಅಡುಗೆ ಮಾಡುತ್ತಾರೆ ಅಂದ್ರೆ ಆಯ್ತು. ನಮ್ಮ ಅವಸ್ಥೆ ಫಜೀತಿ. ಅಯ್ಯೋ ಸಾರಿಗೆ ಜೀರಿಗೆ ಹಾಕಿದ್ರೂ ಉಪ್ಪು ಹಾಕಿಲ್ಲ, ಪಾಯಸಕ್ಕೆ ಸಿಹಿ ಹಾಕಿಲ್ಲ, ಅಂಥೂ ಯಾವುದಾದರೊಂದನ್ನ ಹಾಕಲು ಮರೆತು ಬಿಡುತ್ತಾರೆ. ಅವಸರಕ್ಕೆ ತುತ್ತಾಗಿ ಕಡೆಗೆ ಯಾರ‍್ಯಾರ ಕೋಪಕ್ಕೂ ತುತ್ತಾಗಬೇಕಾಗುತ್ತದೆ. ಅಂತೂ ಈ ಅವಸರದ ಧಿಡೀರ್ ಅಡುಗೆಯಿಂದ ದೊಡ್ಡ ರಾದ್ಧಾಂತವೇ ಆಗಿ ಬಿಡುತ್ತದೆ.

ಆಹಾರ ಸಮಸ್ಯೆಯಿಂದಾಗಿ ರೇಷನ್ ಇರುವ ಸಮಯದಲ್ಲಿ ನೆಂಟರು ಅವಸರದಲ್ಲಿ ಯಾಕೆ ಬಂದು ಹೋಗುವುದಿಲ್ಲ ಅಂತ ಕೆಲವರಿಗೆ ವಿಚಾರ ಬಂದರೂ ಬರಬಹುದು. ಬಂದರೂ ಅದು ಸಹಜ ಎನ್ನಿ. ಕಾಲಾಯ ತಸ್ಮೈ ನಮಃ.

ಕೆಲವರಿಗೆ ಬೆಳಿಗ್ಗೆ ಶಾಲೆ ಕಾಲೇಜಿಗೋ ಅಥವಾ ಆಫೀಸಿಗೋ ಹೋಗಲು ಬೇಗ ಬಸ್ಸು ಹಿಡಿಯ ಬೇಕಾಗುತ್ತದೆ. ಅವರ ಅವಸರದ ಅವಾಂತರಗಳನ್ನು ನೋಡ್ಬೇಕು – ಅದೂ ಒಂದು ಜೋಕು. ಏಳುವಾಗ ತಡವಾಯಿತೆಂದ್ರೆ ಅವಸರದ ರೇಟು ಇನ್ನೂ ಹೆಚ್ಚುತ್ತದೆ. ಶೇವಿಂಗ್ ಸೆಟ್ಟನ್ನು ತೆಗೆದುಕೊಳ್ಳುವ ಬದಲು ಯಾವುದೋ ಬೇರೆ ಸೆಟ್ಟನ್ನು ತೆಗೆದು ಕೊಳ್ಳುತ್ತಾರೆ. ಶೇವಿಂಗ್ ಸೆಟ್ಟನ್ನು ತೆಗೆದುಕೊಂಡರೂ ಕೆನ್ನೆಗಳಿಂದ ನೆತ್ತರ ದಾನವಾಗಲೇ ಬೇಕು. ಕಡೆಗೆ ಹ್ಯಾಗಾದ್ರೂ ಡ್ರೆಸ್ ಮಾಡ್ಕೊಂಡು ಹೊರಟಾಯ್ತು. ಸುಂದರ ರಾವಣನಂತೆ ಅಥವಾ ಆಧುನಿಕ ಸಿನಿಮಾ ನಟನಂತೆಯೇ ಅವಸರದಲ್ಲಿ ಯಾವ ಡ್ರೆಸ್ಸು ಮಾಡಿದ್ರೂ ಅದು ಒಪ್ಪುತ್ತೆ. ಯಾಕೆಂದರೆ ಯಾವ ರೀತಿಯಿಂದಲೂ ಶೃಂಗರಿದರೂ ಅದು ಫ್ಯಾಷನ್ ಅಲ್ಲವೇ? ಬಸ್ಸು ಸಿಕ್ಕು ಅವಸರದಲ್ಲಿ ಮೇಲೆ ಹತ್ತಿಯಾಯಿತು. ಕಂಡಕ್ಟರ್ ಮಹಾಶಯ ಟಿಕೇಟ್ 'ಪ್ಲೀಸ್' ಅನ್ನುತ್ತಾನೆ. ಅಯ್ಯೋ ಹಣವೇ ತರಲೇ ಇಲ್ಲ, ಏನು ಮಾಡೋದು? ಯಾರ ಹತ್ತಿರ ಕೇಳೋದು ಎಂಬ ಸಮಸ್ಯೆ ಹುಟ್ಟುತ್ತದೆ. ಜನಸಂಖ್ಯೆಯ ಸಮಸ್ಯೆ ಮತ್ತು ಆಹಾರ ಸಮಸ್ಯೆಯ ಹಾಗೆ ಇದೂ ಒಂದು ದೊಡ್ಡ ಅವಸರದ ಸಮಸ್ಯೆ ಆಗಿ ಬಿಡುತ್ತದೆ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಇದಕ್ಕೂ ಸ್ವಲ್ಪ ಖರ್ಚು ಮೀಸಲಾಗಿಡಬಹುದು.

ಬ್ಯಾಂಕುಗಳಲ್ಲಿ ಫರ್ಮ್‌ಗಳಲ್ಲಿ ನೌಕರರು ಅವಸರವಸರವಾಗಿ ಬರೆದ್ರೆ ಕೆಲವು ಸೊನ್ನೆಗಳು ಸೇರುವವು ಅಥವಾ ಹೋಗುವವು. ಕೆಲವಕ್ಕೆ ಜೀವದಾನ-ಕೆಲವಕ್ಕೆ ಜೀವ ಬಲಿ ಅನ್ಯಾಯ. ಹೀಗೆ ಅವಸರಕ್ಕೆ ಅವಕಾಶ ಕೊಟ್ರೆ ಹಲವು ಫರ್ಮ್‌ಗಳನ್ನು ಮುಚ್ಚಬೇಕಾದೀತು.

ಡ್ರೈವರುಗಳು ಕಾರುಗಳನ್ನು ಅವಸರದಿಂದ ಅಂದ್ರೆ ಅರ್ಜೆಂಟ್‌ನಲ್ಲಿ ಡ್ರೈವ್ ಮಾಡಬೇಕು. ದೇವರೇ ಗತಿ. ಒಳಗೆ ಕುಳಿತವರ ಸ್ಥಿತಿ ಅಧೋಗತಿ. ಪ್ರಯಾಣಿಕರ ಹಾಗೂ ಕಾರಿನ ಅವನತಿ. ಯಾರು ಹೋದರೇನು ಕಾರಿಗೆ ಇನ್ಶೂರು ಇದೆಯಲ್ಲಾ. ಗಾಯಗೊಂಡು ಬದುಕಿ ಉಳಿದವರ ಉದ್ಗಾರ. ಇದಕ್ಕಿಲ್ಲ ಉಳಿದವರ ಚೀತ್ಕಾರ.

ಕೆಲವರಂತೂ ಬಹಳ ಅವಸರವಾಗಿ ಮಾತಾಡುವುದಿದೆ. ರಾಜನೀತಿ ವಿಷಯ ಮಾತನಾಡುತ್ತಾ ಕ್ರೀಡಾರಂಗಕ್ಕೆ ಇಳಿಯುತ್ತಾರೆ. ನಂತರ ವಿದ್ಯಾರ್ಥಿ ಜೀವನಕ್ಕೆ ಕೈಹಾಕುತ್ತಾರೆ. ಪುನಃ ರಾಮರಾಜ್ಯಕ್ಕೆ ಒಂದು ರಾಜನೀತಿ ಕಲಿಸುತ್ತಾರೆ. ಈ ಪ್ರಾಣಿ ಏನು ಮಾತಾಡುತ್ತದೋ ಎಂದು ನಮಗೆ ತಿಳಿಯುವುದಿಲ್ಲ. ಆದರೆ ಬರೇ ಪ್ರಾಣಿಯಲ್ಲ, ಮಾತಾಡುವ ಪ್ರಾಣಿ ಎರಡೇ ಕಾಲಿನ ಪ್ರಾಣಿ.

ಕೆಲವೇ ಕೆಲವು ಮಾಲು ಉಳಿದಿದೆ ತ್ವರೆ ಮಾಡಿರಿ. ಇಂದೇ ಪಡೆಯಿರಿ. ಈ ಜಾಹಿರಾತು ವಾರ್ತಾಪತ್ರಿಕೆಯ ಮೂಲಕ ಗಿರಾಕಿಗಳನ್ನು ಆಕರ್ಷಿಸುತ್ತದೆ. ಆದ್ರೆ ಗಿರಾಕಿಗಳು ರಶ್ ಮಾಡಿದ್ರೆ ಬೇಡಿಕೆ ಹೆಚ್ಚಾಗಿ ಕ್ರಯ ಗಗನಕ್ಕೇರುತ್ತದೆ. ಆ ಕೆಲವೇ ಕೆಲವು ಮಾಲು ನಮಗೆ ಎಟಕಲಾರದ ಗಗನ ಕುಸುಮವಾಗುತ್ತದೆ. ಆದ್ದರಿಂದ ಎಚ್ಚರಿಕೆ!

ಜಾಹೀರಾತನ್ನು ನೋಡಿದ ಕೂಡಲೇ ಅವಸರದಲ್ಲಿ ಕೆಲವರು ಬರೆಯುತ್ತಾರೆ. ಪೋಸ್ಟ್ ಬಾಕ್ಸ್ ನಂಬರ್ ತಪ್ಪಿ ಕೆಲಸಕ್ಕೆ ಹಾಕಿದ ಅರ್ಜಿ ಮೆಟ್ರಿಮೋನಿಯಲ್ ಸೆಕ್ಷನ್‌ಗೂ ಹೋಗುವ ಸಾಧ್ಯತೆಯಿದೆ. ಅವಸರದ ಮಹಾತ್ಮೆ ಬಹಳ ದೊಡ್ಡದು. ದೂರದಲ್ಲಿಯೇ ನಮಸ್ಕಾರ ಅನ್ನಿ; ವಿಮಾ ಏಜಂಟರನ್ನು ಕಂಡಹಾಗೆ.

ಇನ್ನೊಂದಿದೆ. ಅವಸರದಲ್ಲಿ ಆಗುವ ಅವಾಂತರ. ಅದು ಪ್ರೇಮ-ಲವ್ ಎಂದರೆ ಸರಿಯಾಗಬಹುದು. ಲವ್ ಎಟ್ ಫಸ್ಟ್ ಸೈಟ್. ಮೊದಲ ದೃಷ್ಟಿಯಲ್ಲೇ ಪ್ರೇಮೋದಯ-ಅನ್ನುತ್ತಾರಲ್ಲ ಅದು. ಆದರೆ ಇಂಥ ಲವ್ ಬಹಳಷ್ಟು ಸಮಯ ಸೇವ್ ಮಾಡುತ್ತೆ.

ಅವಸರದಲ್ಲಿ ಮದುವೆಯಾಗಿ ನಂತರ ಪಶ್ಚಾತ್ತಾಪ ಪಡಬೇಡ ಎಂಬುದೊಂದು ಸಲಹೆಯಿದೆ. ಸಂಸಾರ ಸಾಗರದಲ್ಲಿ ಇಳಿದ ಮೇಲೆ ಯಾವ ಬಿರುಗಾಳಿಗೂ ಬಲಿಯಾಗದೆ ಜಯಿಸಬೇಕಷ್ಟೇ. ಹಾಗೆ ಜಯ ಸಿಗಬೇಕಾದ್ರೆ ಅವಸರದಲ್ಲಿ ಮದುವೆಯಾಗಕೂಡದು. ಅದಕ್ಕೋಸ್ಕರವೇ ಪ್ರೇಮ ವಿವಾಹಗಳು ಸಹಾಯಕವಾಗಿವೆ. ವಿವಾಹದ ವಯೋಮಿತಿಯನ್ನು ಏರಿಸಿದರೆ ಅದು ಮತ್ತಷ್ಟು ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

ಭಗವಂತನೂ ಅವಸರ ಮಾಡುವುದಿದೆ. ಯಾರನ್ನು ಅವನು ಪ್ರೀತಿಸುತ್ತಾನೋ ಅವರನ್ನು ತನ್ನ ಬಳಿಗೆ ಬೇಗ ಕರೆಯುತ್ತಾನಂತೆ. ಅಂದರೆ ಉತ್ತಮನು ಬಹಳ ಬೇಗ ಸಾಯುವುದು ಎಂದು ಪ್ರತೀತಿಯಿದೆ. ಭಗವಂತನು ಹೀಗೆ ಅವಸರಮಾಡದಿದ್ರೆ ಉತ್ತಮರಿಂದ ಎಷ್ಟೋ ಲೋಕೋದ್ಧಾರವಾಗುತ್ತಿತ್ತು. ಆದ್ದರಿಂದ ಇಂಥ ಅನ್ಯಾಯವನ್ನು ನಿಲ್ಲಿಸುವುದಕ್ಕೋಸ್ಕರ ಒಂದು ಬೆದರಿಕೆ ಪತ್ರವನ್ನು ಅಲ್ಲಿಗೆ ಕಳುಹಿಸಬೇಕಾಗುತ್ತದೆ. ಸಾರಂಶ ಹೀಗಿರಬೇಕು-ಇಂಥ ಅನ್ಯಾಯ ಕೃತ್ಯವನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಘೇರಾವೋ ಅಥವಾ ಥೇರಾವೊ ಮಾಡುವುದು ಅನಿವಾರ್ಯ. ಕುಟುಂಬ ಯೋಜನೆ ಬಹಳ ಭರದಿಂದ ಸಾಗುತ್ತಿದೆ. 'ಎರಡು ಮಕ್ಕಳು ಸಾಕು', 'ಚಿಕ್ಕ ಸಂಸಾರ ಚೊಕ್ಕ ಸಂಸಾರ' ಎಂಬ ಘೋಷಣೆಗಳು ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ಇಲ್ಲಿ ಭಾರತ ವಾಸಿಗಳು ಅವಸರ ಮಾಡ್ಬೇಕು ತನ್ನ ಒಳ್ಳೆಯದಕ್ಕೆ ದೇಶದ ಒಳ್ಳೆಯದಕ್ಕೆ ಆದಷ್ಟು ಬೇಗ ಅಂದ್ರೆ ಅವಸರದಲ್ಲಿ ಕುಟುಂಬ ಯೋಜನೆಯ ಶರಣು ಹೋಗಬೇಕು.

ಯಾವಾಗ ಅವಸರಬೇಕು ಯಾವಾಗ ಅವಸರ ಸಾಕು ಎಂಬುದನ್ನು ಸರಿಯಾಗಿ ವಿಚಾರಿಸಿಕೊಂಡು ಬಾಳದೋಣಿಯನ್ನು ಮುಂದೆ ಸಾಗಿಸಿರಿ. ನಿಮಗೆ ವಿಜಯ ಖಂಡಿತ. ಈ ಪ್ರಾಮಿಸ್‌ನೊಂದಿಗೆ ಅವಸರದ ಅವಾಂತರಗಳನ್ನು ನಿಲ್ಲಿಸಬೇಕೆಂದಿದ್ದೇನೆ. ಆದರೆ ಅವಸರದಲ್ಲಿ ಬರೆದು ಮುಗಿಸಿಲ್ಲ. ಯಾಕೆಂದರೆ ಇಷ್ಟೆಲ್ಲಾ ಹೇಳಿದ್ದು ಬರಿಯ ವ್ಯರ್ಥವಾಗಕೂಡದಷ್ಟೆ?

## ಮಾಂಗಲ್ಯಂ ತಂತುನಾನೇನ ....

ಹಿರಿಯಡ್ಕ ಶ್ರೀಮತಿ ಸರೋಜ ಮತ್ತು ಶ್ರೀ ಕೆ.ಕೃಷ್ಣರಾಯರ ಪುತ್ರ **ಗೌರೀಶ** ಹಾಗೂ ಶ್ರೀಮತಿ ವಿನಯ ಮತ್ತು ವೆಂಕಟೇಶ ಶ್ಯಾನುಭೋಗರ ಪುತ್ರಿ **ಶ್ವೇತಾ** ಇವರ ವಿವಾಹವು ತಾ.22-10-2012ರಂದು ಎರ್ಮಾಳು ಶ್ರೀ ರಾಜರಾಜೇಶ್ವರಿ ಸಭಾಭವನದಲ್ಲಿ ನೆರವೇರಿತು.

★★★ ★★★

ಕುಂಜೂರು ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ರಮೇಶ್‌ರಾವ್ ಇವರ ಪುತ್ರ **ಅರುಣ್‌ಕುಮಾರ್** ಹಾಗೂ ಕಡಬ ಕುಂಭಾಟ್ ಶ್ರೀಮತಿ ಕೆ. ರಾಜೇಶ್ವರಿ ಮತ್ತು ಶ್ರೀ ಪ್ರಕಾಶ್ ರಾವ್ ಇವರ ಪುತ್ರಿ **ಮಂಜುಶ್ರೀ** ಇವರ ವಿವಾಹವು ತಾ.28-10-2012ರಂದು ಬೆಂಗಳೂರು ಕೊಡಿಗೆಹಳ್ಳಿಯಲ್ಲಿರುವ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಸನ್ನಿಧಿಯ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಭಾರತಿ ಮತ್ತು ಶ್ರೀ ಎ. ಕೃಷ್ಣರಾವ್ ಇವರ ಪುತ್ರಿ **ರಕ್ಷಿತಾ** ಹಾಗೂ ಶ್ರೀಮತಿ ಉಷಾಕಿರಣ್ ಮತ್ತು ಶ್ರೀ ವಿದ್ಯಾಧರ ಇವರ ಪುತ್ರ **ಅನೂಪ್ ಕುಮಾರ್** ಇವರ ವಿವಾಹವು ತಾ.29-10-2012 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀ ಐ. ಕೆ. ವೇಣುಗೋಪಾಲ ರಾವ್ ಮತ್ತು ಶ್ರೀಮತಿ ಜಾಹ್ನವಿ ಇವರ ಪುತ್ರಿ **ಶ್ರೀಲತಾ** ಹಾಗೂ ಬೆಂಗಳೂರು ಶ್ರೀಮತಿ ಶಾರದಾ ಮತ್ತು ಶ್ರೀ ಎಸ್. ವಿಜಯಕುಮಾರ್ ಇವರ ಪುತ್ರ **ವಿ. ಸುಬ್ಬಕೃಷ್ಣ** ಇವರ ವಿವಾಹವು ತಾ.29-10-2012 ರಂದು ಕಾರ್ಕಳ ತೆಳ್ಳಾರು ರಸ್ತೆ, ಶ್ರೀ ರಾಘವೇಂದ್ರ ಮಠದ ಶ್ರೀ ಗೋವಿಂದ ಧಾರ್ಮಿಕ ಸಭಾಭವನದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಶಾಂತಾ ಮತ್ತು ಶ್ರೀ ನಾಗರಾಜ ರಾವ್ ಅಲೆವೂರು ಇವರ ಪುತ್ರಿ **ರೂಪಾ** ಹಾಗೂ ಶ್ರೀಮತಿ ಚಂಪಲತಾ ಮತ್ತು ಶ್ರೀ ಮಲ್ಲೇಶ್ ಹೆಬ್ಬಾರ್ ಗೋವಿಂದಬೆಟ್ಟು ಕಬ್ಬಿನಾಲೆ ಇವರ ಪುತ್ರ **ರಾಹುಲ್** ಇವರ ವಿವಾಹವು ತಾ.01-11-2012ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ದಿ। ಮಹಾಬಲಯ್ಯ ಪಿ. ಜೇಡಿಕುಣಿ ಇವರ ಸುಪುತ್ರ **ಗುರುಪ್ರಸಾದ್** ಹಾಗೂ ದಿ। ಪಂಡಿತ್ ಲಕ್ಷ್ಮಣ್ ರಾವ್ ಇವರ ಪುತ್ರಿ **ಶೋಭಾ** ಇವರ ವಿವಾಹವು ತಾ.04-11-2012ರಂದು ಕಾರ್ಕಳ ತಾಲೂಕು ಮಿಯ್ಯಾರು ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವದಲ್ಲಿ ನೆರವೇರಿತು.

## ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 24-11-2012 | ಏಕಾದಶಿ |
| 28-11-2012 | ಹುಣ್ಣಿಮೆ |
| 02-12-2012 | ಸಂಕಷ್ಟಹರ ಚೌತಿ |
| 09-12-2012 | ಏಕಾದಶಿ |
| 13-12-2012 | ಅಮಾವಾಸ್ಯೆ |
| 15-12-2012 | ಧನುಸಂಕ್ರಮಣ |

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಸಿಹಿಮೂತ್ರ ರೋಗಕ್ಕೆ ಕಾರಣಗಳೇನು? ಇದರ ಚಿಕಿತ್ಸೆ ಹೇಗೆ?**

**ಉತ್ತರ :** ನಾವು ತಿನ್ನುವ ಯಾವುದೇ ಆಹಾರವು ಕರುಳಿನಲ್ಲಿ ಜೀರ್ಣವಾಗಿ ರಕ್ತಕ್ಕೆ ಸೇರಿದ ಬಳಿಕ ಅದನ್ನು ದೇಹವು ಒಂದೋ ಶಕ್ತಿಯ ಮೂಲವನ್ನಾಗಿ ಅಥವಾ ದೇಹದ ಬೆಳವಣಿಗೆಗಾಗಿ ಬಳಸುತ್ತದೆ. ಇನ್ನೂ ಮಿಕ್ಕುಳಿದರೆ ಅದನ್ನು ಮುಂದೆ ಉಪಯೋಗಕ್ಕೆ ಎಂದು ಕೊಬ್ಬಿನ ರೂಪದಲ್ಲಿ ಕೂಡಿಡುತ್ತದೆ. ನಮ್ಮ ದೇಹದ ಎಲ್ಲಾ ಜೀವಕೋಶಗಳಿಗೆ ಅವುಗಳ ದಿನನಿತ್ಯದ ವ್ಯವಹಾರಗಳನ್ನು ನಡೆಸುವುದಕ್ಕೆ ಶಕ್ತಿಬೇಕು. ನಾವು ಸೇವಿಸುವ ಆಹಾರವನ್ನು ಉರುವಲನ್ನಾಗಿ ಬಳಸಿಕೊಳ್ಳುವುದರ ಮೂಲಕ ಈ ಶಕ್ತಿಯನ್ನು ನಮ್ಮ ಜೀವಕೋಶಗಳು ಪಡೆಯುತ್ತವೆ. ರಕ್ತದಲ್ಲಿ ಗ್ಲುಕೋಸ್‌ನ ರೂಪದಲ್ಲಿರುವ ಆಹಾರವು ನಮ್ಮ ದೇಹದ ಜೀವಕೋಶಗಳಿಗೆ ಶಕ್ತಿಯ ಮೂಲವಾಗಿದೆ. ಜೀವಕೋಶಗಳು ರಕ್ತದಲ್ಲಿರುವ ಗ್ಲುಕೋಸನ್ನು ಬಳಸಲು ಇನ್ಸುಲಿನ್ ಎಂಬ ಹಾರ್ಮೋನೊಂದು ಮಧ್ಯವರ್ತಿಯಾಗಿ ಕೆಲಸ ಮಾಡುತ್ತದೆ, ಈ ಇನ್ಸುಲಿನ್ ಇದ್ದರೆ ಮಾತ್ರ ಜೀವಕೋಶಗಳು ರಕ್ತದಲ್ಲಿರುವ ಗ್ಲುಕೋಸನ್ನು ಹೀರಿಕೊಳ್ಳಲು ಶಕ್ತವಾಗುವವು. ಅಷ್ಟು ಮಾತ್ರವಲ್ಲದೆ ರಕ್ತದಲ್ಲಿ ಜೀವಕೋಶಗಳು ಬಳಸಿದ ನಂತರವೂ ಹೆಚ್ಚಿಗೆ ಇರುವ ಗ್ಲುಕೋಸನ್ನು ಗ್ಲೈಕೋಜನ ಎಂಬ ರೂಪದಲ್ಲಿ ತೆಗೆದಿಡುವುದೂ ಈ ಇನ್ಸುಲಿನ್‌ನ ಕೆಲಸ. ರಕ್ತದಲ್ಲಿರುವ ಗ್ಲುಕೋಸನ್ನು ಜೀವಕೋಶಗಳು ಸತತವಾಗಿ ಬಳಸಿಕೊಳ್ಳುತ್ತಿರುವುದರಿಂದಲೂ ಹಾಗೂ ಹೆಚ್ಚಿಗೆ ಆದ ಗ್ಲುಕೋಸನ್ನು ಗ್ಲೈಕೋಜೆನ ಆಗಿ ಪರಿವರ್ತಿಸುವುದರಿಂದಲೂ ರಕ್ತದಲ್ಲಿ ಗ್ಲುಕೋಸನ ಮಟ್ಟ ಸಾಮಾನ್ಯವಾಗಿ 80ಯಿಂದ 140 ಎಮ್.ಜಿ.ಯೊಳಗಿರುತ್ತದೆ. ಒಂದು ವೇಳೆ ದೇಹದಲ್ಲಿ ಇನ್ಸುಲಿನ್‌ನ ಕೊರತೆಯಿದ್ದರೆ ಜೀವಕೋಶಗಳು ರಕ್ತದಲ್ಲಿರುವ ಗ್ಲುಕೊಸನ್ನು ಉಪಯೋಗಿಸಿಕೊಳ್ಳುವುದಿಲ್ಲ, ಅಷ್ಟು ಮಾತ್ರವಲ್ಲದೆ ಗ್ಲುಕೋಸನ್ನು ಗ್ಲೈಕೋಜೆನ ಆಗಿ ಪರಿವರ್ತಿಸುವ ಕೆಲಸವೂ ನಡೆಯುವುದಿಲ್ಲ. ಹಾಗಾಗಿ ರಕ್ತದಲ್ಲಿ ಗ್ಲುಕೋಸನ ಮಟ್ಟ ಏರುತ್ತದೆ ಈ ಖಾಯಿಲೆಯನ್ನು ಡಯಾಬಿಟಿಸ್ ಮೆಲ್ಲಿಟಸ್ ಎಂದು ಕರೆಯುತ್ತೇವೆ. ರಕ್ತದಲ್ಲಿ ಲೆಕ್ಕಕ್ಕಿಂತ ಹೆಚ್ಚಿಗೆ ಇರುವ ಗ್ಲುಕೋಸನ್ನು ಮೂತ್ರಜನಕಾಂಗವು ಮೂತ್ರದಲ್ಲಿ ಹೊರಹಾಕಲು ಪ್ರಯತ್ನಿಸುತ್ತದೆ. ಸಾಮಾನ್ಯ ಮನುಷ್ಯನ ಮೂತ್ರದಲ್ಲಿ ಗ್ಲುಕೋಸ್ ಇರುವುದಿಲ್ಲ. ಡಯಾಬಿಟಿಸ್ ರೋಗಿಯ ರಕ್ತದಲ್ಲಿ ಅಧಿಕ ಪ್ರಮಾಣದಲ್ಲಿರುವ ಗ್ಲುಕೋಸನ್ನು ದೇಹವು ಮೂತ್ರದಲ್ಲಿ ಹೊರಹಾಕುವುದರಿಂದ ಡಯಾಬಿಟಿಸ್ ರೋಗಿಗಳ ಮೂತ್ರದಲ್ಲಿ ಮಾತ್ರ ಗ್ಲುಕೋಸ್ ಇರುತ್ತದೆ. ಆದುದರಿಂದ ಈ ಖಾಯಿಲೆಯನ್ನು ಸಿಹಿಮೂತ್ರ ರೋಗ ಎಂದು ಕರೆಯುತ್ತಾರೆ.

ರಕ್ತಕ್ಕೆ ಇನ್ಸುಲಿನ್ನನ್ನು ಸ್ರವಿಸುವುದು ಹೊಟ್ಟೆಯಲ್ಲಿರುವ ಮೇದೋಜೀರಕ ಗ್ರಂಥಿಯ ಕೆಲಸ. ಈ ಗ್ರಂಥಿಯಲ್ಲಿರುವ ಬೀಟಾ ಎಂಬ ಹೆಸರಿನ ಜೀವಕೋಶಗಳು ರಕ್ತದಲ್ಲಿ ಗ್ಲುಕೋಸನ ಮಟ್ಟವು ಯಾವಾಗಲೂ ಸುಮಾರು 80ಯಿಂದ 140 ಎಮ್.ಜಿ.ಯೊಳಗೆ ಇರುವಂತೆ ಸರಿಯಾಗಿ ಎಷ್ಟು ಬೇಕೋ ಅಷ್ಟು ಪ್ರಮಾಣದಲ್ಲಿ ಇನ್ಸುಲಿನನ್ನು ರಕ್ತಕ್ಕೆ ಸ್ರವಿಸುತ್ತವೆ. ಬೀಟಾ ಜೀವಕೋಶಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡಲು ವಿಫಲವಾದಾಗ ಅಂದರೆ ಇನ್ಸುಲಿನನ್ನು ಸರಿಯಾಗಿ ಸ್ರವಿಸದಿದ್ದರೆ ರಕ್ತದಲ್ಲಿ ಸಕ್ಕರೆಯ ಅಂಶ ಹೆಚ್ಚುತ್ತದೆ. ಇದು ಸಿಹಿ ಮೂತ್ರರೋಗದ ತಿರುಳು.

ಬೀಟಾ ಜೀವಕೋಶಗಳು ತಮ್ಮ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದಿರಲು ಅನುವಂಶಿಕವಾಗಿ ಬರುವ ನಮ್ಮ ವಂಶವಾಹಿಗಳಲ್ಲಿರುವ ಕೆಲವು ದೋಷಗಳೇ ಪ್ರಮುಖ ಕಾರಣವಾಗಿರುತ್ತದೆ. ಮದ್ಯಪಾನ, ಕೆಲವು ಔಷಧಗಳನ್ನು ಸತತವಾಗಿ ಸೇವಿಸುವುದು ಹಾಗೂ ಬೊಜ್ಜು ದೇಹ ಇವುಗಳು ಸಕ್ಕರೆ ಕಾಯಿಲೆ ಬರಲು ಇನ್ನಿತರ ಮುಖ್ಯ ಕಾರಣಗಳು, ಇನ್ನು ವಯಸ್ಸಾದಂತೆ ಬೀಟ ಜೀವಕೋಶಗಳ ಕ್ಷಮತೆ ಕುಗ್ಗುವುದು ಪ್ರಕೃತಿ ಸಹಜವಾದ ಪ್ರಕ್ರಿಯೆ. ವ್ಯಾಯಾಮರಹಿತ ದಿನಚರಿ, ಮೇದೋಜೀರಕ ಗ್ರಂಥಿಯ ಖಾಯಿಲೆಗಳು ಹಾಗು ಕೆಲವು ವೈರಸ್‌ನ ಬಾಧೆಗಳಿಂದಲೂ ಬೀಟಾ ಜೀವಕೋಶಗಳ ಕ್ಷಮತೆ ಕುಗ್ಗಬಹುದು. ಕೆಲವೊಮ್ಮೆ ಗರ್ಭಿಣಿಯರಲ್ಲಿ ತಾತ್ಕಾಲಿಕವಾಗಿ ಈ ತೊಂದರೆ ಕಾಣಿಸುವುದಿದೆ.

ಡಯಾಬಿಟಿಸ್ ಕಾಯಿಲೆ ಒಮ್ಮೆ ಆರಂಭವಾದರೆ ಸಂಪೂರ್ಣವಾಗಿ ಗುಣಪಡಿಸುವುದು ಸಾಧ್ಯವಿಲ್ಲ. ನಾವು ಕೆಲವು ಉಪಕ್ರಮಗಳು ಹಾಗೂ ಔಷಧಿಗಳ ಮೂಲಕ ರಕ್ತದ ಗ್ಲುಕೋಸ್ ಮಟ್ಟವನ್ನು ಹತೋಟಿಯಲ್ಲಿಟ್ಟು ಕೊಳ್ಳಬಹುದು ಅಷ್ಟೆ. ರಕ್ತದಲ್ಲಿ ಗ್ಲುಕೋಸ್‌ನ ಮಟ್ಟವು ಸುಮಾರು 80 ಯಿಂದ 180 ಎಮ್.ಜಿ.ಯೊಳಗಿರುವಂತೆ ಪ್ರಯತ್ನಿಸಬೇಕು. ಇದಕ್ಕಿಂತ ಕಡಿಮೆ ಅಥವಾ ಹೆಚ್ಚಿರುವುದು ಆರೋಗ್ಯಕ್ಕೆ ಒಳ್ಳೆಯದಲ್ಲ. ಈ ನಿಟ್ಟಿನಲ್ಲಿ ಕೆಲವು ಸಲಹೆಗಳು ಹೀಗಿವೆ.

ಅಹಾರದಲ್ಲಿ ಶರ್ಕರ ಪಿಷ್ಟಗಳ ಪ್ರಮಾಣ ಕಡಿಮೆಯಾಗಿರಬೇಕು. ನಾವು ತಿನ್ನುವ ಯಾವುದೇ ಆಹಾರದಲ್ಲಿ ಶರ್ಕರ ಪಿಷ್ಟಗಳು ಇದ್ದೇ ಇರುತ್ತದೆ. ಆದರೆ ನಾಲಗೆಗೆ ಸಿಹಿಯೆನಿಸುವ ಪದಾರ್ಥಗಳಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಆದುದರಿಂದ ಸಿಹಿಮೂತ್ರ ರೋಗಿಗಳು ನಾಲಗೆಗೆ ಸಿಹಿಯೆನಿಸುವ ಎಲ್ಲಾ ಪದಾರ್ಥಗಳನ್ನು ವರ್ಜಿಸಬೇಕು.

ಕೆಲವು ಆಹಾರ ಪದಾರ್ಥಗಳಲ್ಲಿ ಶರ್ಕರ ಪಿಷ್ಟಗಳ ಅಂಶ ತುಂಬಾ ನಿಕೃಷ್ಟ ಪ್ರಮಾಣದಲ್ಲಿದೆ (ಉದಾ: ಹಸಿರು ಬಣ್ಣದ ಸೊಪ್ಪು ತರಕಾರಿಗಳು). ಇಂತಹ ಪದಾರ್ಥಗಳನ್ನು ಅಧಿಕ ಪ್ರಮಾಣದಲ್ಲಿ ಸೇವಿಸಬೇಕು.

ಇನ್ನುಳಿದ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ರಾಗಿ, ಬೇಳೆ ಕಾಳುಗಳು, ಹಾಲು, ಮೊಟ್ಟೆ, ಮೀನು, ಮಾಂಸ, ಹಣ್ಣು ಇತ್ಯಾದಿಗಳನ್ನು ನಮಗೆ ದಿನಕ್ಕೆ ಬೇಕಾಗುವ ಶಕ್ತಿಯ ಪ್ರಮಾಣವನ್ನು ಅವಲಂಬಿಸಿಕೊಂಡು ಎಷ್ಟು ಬೇಕೋ ಅಷ್ಟೇ ಸೇವಿಸಬೇಕು. ಸಾಧಾರಣವಾಗಿ ನಾವು ಸೇವಿಸುವ ಆಹಾರ ಪದಾರ್ಥದಲ್ಲಿರುವ ಶಕ್ತಿಯ ಪ್ರಮಾಣ (ಕ್ಯಾಲೋರಿ)ವನ್ನು ತಿಳಿದುಕೊಂಡು (ಈ ಬಗ್ಗೆ ಮಾಹಿತಿಗಳು ಅನೇಕ ಪುಸ್ತಕಗಳಲ್ಲಿ, ಅಂತರ್ಜಾಲದಲ್ಲಿ ಲಭ್ಯವಿವೆ, ಇಲ್ಲವಾದಲ್ಲಿ ನಿಮ್ಮ ವೈದ್ಯರು, ಡಯಟಿಶಿಯನ್‌ರಿಂದ ತಿಳಿದು ಕೊಳ್ಳಿರಿ) ಬೇಕಾದಷ್ಟೇ ಪ್ರಮಾಣದಲ್ಲಿ ಆಹಾರ ಸೇವಿಸಿರಿ.

ಇನ್ನು ಸೇವಿಸಿದ ಕ್ಯಾಲೋರಿಗಳು ಖರ್ಚಾಗಲು ವ್ಯಾಯಾಮವನ್ನು ಯಾವುದೇ ರೀತಿಯಲ್ಲಾದರೂ ದಿನನಿತ್ಯವೂ ಮಾಡಬೇಕು. ವ್ಯಾಯಾಮದಿಂದ ಕ್ಯಾಲೋರಿಗಳು ಖರ್ಚಾಗುವುದು ಮಾತ್ರವಲ್ಲದೇ ದೇಹದ ಕೊಬ್ಬನ್ನಿಳಿಸಲು, ಇದುವೇ ಉತ್ತಮ ಉಪಾಯ. ವ್ಯಾಯಾಮದಿಂದ ಬೀಟ ಜೀವಕೋಶಗಳ ಕ್ಷಮತೆಯೂ ಸುಧಾರಿಸುತ್ತದೆ. ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ರೋಗಿಯ ಆತ್ಮವಿಶ್ವಾಸವು ಬಲಗೊಳ್ಳುತ್ತದೆ.

ಡಯಾಬಿಟಿಸ್ ಖಾಯಿಲೆ ಬರಲು ಕಾರಣವೇನಿರಬಹುದೆಂದು ಪರಾಮರ್ಶಿಸಿಕೊಳ್ಳಿರಿ. ಮದ್ಯಪಾನ ತ್ಯಜಿಸಬೇಕು, ಔಷಧಿಯ ಸೇವನೆಯಿಂದಾಗಿದ್ದರೆ ಅದಕ್ಕೆ ಬದಲಿ ಔಷಧಿಯೇನಾದರಿದೆಯೇ ವಿಚಾರಿಸಿರಿ, ದೇಹದ ತೂಕ ಖಂಡಿತಾ ಇಳಿಸಿಕೊಳ್ಳಲೇಬೇಕು.

ರಕ್ತದಲ್ಲಿ ಗ್ಲುಕೋಸ್‌ನ ಮಟ್ಟವನ್ನು ಹತೋಟಿಗೆ ತರಲು ಹತ್ತಾರು ನಮೂನೆಯ ಮಾತ್ರೆಗಳು ಲಭ್ಯವಿವೆ. ಈ ಮಾತ್ರೆಗಳನ್ನು ಡಯಾಬಿಟಿಸ್‌ಗೆ ಮೊದಲ ಹಂತದ ಚಿಕಿತ್ಸೆಯಾಗಿ ಬಳಸುತ್ತಾರೆ. ಈ ಮಾತ್ರೆಗಳಿಂದಲೂ ಸಕ್ಕರೆಯ ಅಂಶ ಹತೋಟಿಗೆ ಬರದಿದ್ದರೆ ಕೃತಕ ಇನ್ಸುಲಿಸ್‌ಗಳು ಲಭ್ಯವಿವೆ. ಇನ್ಸುಲಿನ್‌ನನ್ನು ಈ ಸಂಧರ್ಭದಲ್ಲಿ ಮಾತ್ರವಲ್ಲದೆ ರಕ್ತದಲ್ಲಿ ಸಕ್ಕರೆಯ ಅಂಶವನ್ನು ಶೀಘ್ರವಾಗಿ ಹತೋಟಿಗೆ ತರಬೇಕಾದ ಸಂದರ್ಭಗಳಲ್ಲೂ ಬಳಸುತ್ತಾರೆ.

ಈ ಮುಂಚೆ ಪ್ರಾಣಿಜನ್ಯ ಇನ್ಸುಲಿನ್ನನ್ನು ಬಳಸುತ್ತಿದ್ದು ಈಗ ಅದನ್ನು ಯಾರೂ ಬಳಸುವುದಿಲ್ಲ, ಈಗ ಉಪಯೋಗಿಸುವ ಇನ್ಸುಲಿನ್, ಕೃತಕವಾಗಿ ಲೆಬೋರೇಟರಿಗಳಲ್ಲಿಡಿ. ಏನ್.ಏರಿಕಾಂಬಿಟೆಂಟ್ಟೆಕ್ನಾಲಜಿ ಬಳಸಿತಯಾರಾಗುವಂತದ್ದು. ಆದರೆ ಇನ್ಸುಲಿನ್ ಪರಿಣಾಮಕಾರಿಯಾಗಲು ಅದನ್ನು ಚುಚ್ಚುಮದ್ದಿನ ರೂಪದಲ್ಲೇ ಬಳಸಬೇಕಾಗುತ್ತದೆ. ಈ ಚುಚ್ಚುಮದ್ದು ನೋವು ರಹಿತವಾಗಿರಲು ಇನ್ಸುಲಿನ್ ಪೆನ್ನುಗಳನ್ನು ಆವಿಷ್ಕರಿಸಿದ್ದಾರೆ. ಈ ಪೆನ್ನುಗಳಲ್ಲಿ ಅತ್ಯಂತ ಸಪೂರವಾದ ಹಾಗೂ ಚೂಪಾದ ಸೂಜಿಯಿದ್ದು ಅದನ್ನು ಚುಚ್ಚಿದಾಗ ನಿರ್ದಿಷ್ಟ ಪ್ರಮಾಣದಲ್ಲಿ ಔಷಧಿಯನ್ನು ದೇಹಕ್ಕೆ ಸೇರಿಸುತ್ತದೆ.

ಇನ್ಸುಲಿನ್ನನ್ನು ಮಾತ್ರೆಯ ರೂಪದಲ್ಲಿ ಸೇವಿಸಲು ಆಗುವಂತೆ ಮಾಡಲು ಸಂಶೋಧನೆ ಆಗುತ್ತಿದೆ ಹಾಗೂ ಕೆಲವರು ಇದನ್ನು ಸಾಧಿಸಿದ್ದೇವೆಂದೂ ಹೇಳುತ್ತಾರೆ. ಆದರೂ ಇದಿನ್ನೂ ದಿನನಿತ್ಯದ ಬಳಕೆಗೆ ಬಂದಿಲ್ಲ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

## ಶ್ರೀಎಲ್ಲೂರುಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ)

76, ಬಡಗಬೆಟ್ಟು ಕುಕ್ಕಿಕಟ್ಟೆ, ಉಡುಪಿ–576101.

### ವಿದ್ಯಾರ್ಥಿ ವೇತನಕ್ಕೆ ಅರ್ಜಿ

ಇತ್ತೀಚೆಗೆ ದೈವಾಧೀನರಾದ ಬೆಂಗಳೂರಿನ ಶ್ರೀ ಸಾತ್ವಿಕ್ ಶಾಸ್ತ್ರಿಯವರ ಸ್ಮರಣಾರ್ಥ ಅವರ ಮಾತಾಪಿತರಾದ ಶ್ರೀದಿನೇಶ ಶಾಸ್ತ್ರಿ ಹಾಗೂ ಶ್ರೀಮತಿ ಉಷಾ ಶಾಸ್ತ್ರಿಯವರು ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ, ಹತ್ತನೆಯ ತರಗತಿಯ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ, ವಿದ್ಯಾರ್ಥಿವೇತನ ನೀಡಲು ಉದ್ದೇಶಿಸಿರುತ್ತಾರೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಇದರ ಸದುಪಯೋಗ ಪಡೆದುಕೊಳ್ಳಲು ಕೋರುತ್ತಿದ್ದೇವೆ.

ಹಾಗೆಯೇ ನಮ್ಮ ಟ್ರಸ್ಟ್‌ನ ವತಿಯಿಂದ ಪ್ರತಿವರ್ಷವೂ ಕೊಡಲಾಗುವ ದಿ|ಡಾ|ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕೆ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಂದಲೂ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

ಕೈಬರಹದ ಅರ್ಜಿಯಲ್ಲಿ ಹೆತ್ತವರ ಹೆಸರು, ವಿಳಾಸ, ಉದ್ಯೋಗ, ವಿಳಾಸ ಹಾಗೂ ದೂರವಾಣಿ ಸಂಖ್ಯೆ ನಮೂದಿಸಿರಬೇಕು. ಹಾಗೆಯೇ ಅದರೊಂದಿಗೆ ಆದಾಯ ಪ್ರಮಾಣಪತ್ರ, ಹಿಂದಿನ ವರ್ಷದ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ಪ್ರಥಮ ಪುಟದ ಪ್ರತಿಯನ್ನು ಲಗತ್ತಿಸಿರಬೇಕು.

**ಈ ಎರಡು ವಿದ್ಯಾರ್ಥಿವೇತನಗಳಿಗೆ ಅರ್ಜಿಗಳನ್ನು ಡಾ|ವೈ.ಸುದರ್ಶನ್ ರಾವ್, ಕೆನರಾ ಹೆಲ್ತಸೆಂಟರ್, ಅಂಜುಮಾನ್ ರಸ್ತೆ, ಸಿಟಿ ಬಸ್ಟ್ಯಾಂಡ್ ಬಳಿ, ಉಡುಪಿ–576101 ಇಲ್ಲಿಗೆ ತಾ.30-11-2012ರೊಳಗೆ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ.**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6–00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5–00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5–00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4–30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.02-12-2012) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.18-11-2012 ಲಲಿತಾ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.16-11-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ

### ನವೆಂಬರ್–ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

**ದರ್ಶನ ಸಮಯ : ಬೆಳಿಗ್ಗೆ 5-00ರಿಂದ ರಾತ್ರಿ 8-00**

ಪೂಜಾ ಸಮಯ (ಮಂಗಳಾರತಿ) ಪ್ರಾತಃ : ವೇದೋಕ್ತ ಪೂಜೆ 6–00ರಿಂದ 6–30
ಮಧ್ಯಾಹ್ನ : ಕಲ್ಪೋಕ್ತ ಪೂಜೆ 12–00ರಿಂದ 12–30
ಸಂಜೆ : ಪುರಾಣೋಕ್ತ ಪೂಜೆ 7–30ರಿಂದ 8–00

ಪ್ರತಿನಿತ್ಯ ಸಾಯಂಕಾಲ ಸೇವಾದಾರರ ವತಿಯಿಂದ ರಂಗಪೂಜೆ, ಪ್ರತಿನಿತ್ಯ ಸುಬ್ರಹ್ಮಣ್ಯ ಹೋಮ. ಪ್ರತಿದಿನ ಮಧ್ಯಾಹ್ನ 1–00ರಿಂದ 3–00ರ ತನಕ ನಿತ್ಯಾನ್ನದಾನ. ಪ್ರತೀ ಶನಿವಾರ ಸಾಯಂಕಾಲ 5–00ರಿಂದ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಶ್ರೀ ರಾಮನಾಮ ಸಂಕೀರ್ತನೆ ಹಾಗೂ ತೈಲಾಭಿಷೇಕ.

★★★★★★★★★★

**ತಾ.16-11-2012 ವೃಶ್ಚಿಕ ಸಂಕ್ರಮಣ ಸಮಾರಾಧನೆ.**

**ತಾ.16-12-2012 ಧನು ಸಂಕ್ರಮಣ ಸಮಾರಾಧನೆ.**

**ತಾ.18-11-2012 ಶುದ್ಧ ಪಂಚಮಿ, ನಾಗ ಸನ್ನಿಧಿಯಲ್ಲಿ ಸೇವೆಗಳು.**

★★★★★★★★★★

ತಾ.13–11–2012 ಸಾಯಂಕಾಲ 7–00ಕ್ಕೆ **ಅಮಾವಾಸ್ಯೆ, ದೀಪಾವಳಿ, ದೇವರ ಹಬ್ಬ, ಬಲಿ, ಬಲೀಂದ್ರ ಪೂಜೆ ಇತ್ಯಾದಿ.**

ತಾ.14–11–2012 **ಸಾಮೂಹಿಕ ಗೋಪೂಜೆ.**

ತಾ.14–11–2012ರಿಂದ ತಾ.13–12–2012ರ ವರೆಗೆ ಪ್ರತಿದಿನ ಸಾಯಂಕಾಲ 7–00ರಿಂದ 8–15ರ ವರೆಗೆ ಸೇವಾದಾರರ ವತಿಯಿಂದ **ಕಾರ್ತಿಕ ದೀಪೋತ್ಸವ.**

ತಾ.16–12–2012ರಿಂದ ತಾ.18–12–2012ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ **ಚಂಪಾಷಷ್ಠಿ ಮಹೋತ್ಸವ.**

ತಾ.16–12–2012ರಿಂದ ಪ್ರಾತಃಕಾಲ **ಧನುರ್ಮಾಸ ಪೂಜೆ** ಪ್ರಾರಂಭ.



ಎಮ್. ದೇವಾನಂದ್ ಭಟ್ Cell : 9845644556 9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Celebrations
Conference & Party Hall (Air Conditioned)
HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.

FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. : ADARSH RAO

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Rajataadri, Manipal, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org